# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 10 ಅಕ್ಟೋಬರ್ 2000

## ಈ ಸಂಚಿಕೆಯಲ್ಲಿ



ಅಸೋಸಿಯೇಷನ್ನಿನಲ್ಲಿ 51ನೇ ಸಂಗೀತೋತ್ಸವ • ರಮಾ ವಸಂತ್ 2





ಹೀಗಿದ್ದರು: ನಮ್ಮ ಪದ್ಮಭೂಷಣ ಡಾ| ಉಷಾ ಮೆಹ್ತಾ • ಲೀಲಾ ಜೋಯಿಸ್ 8



ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೬ • ಸುಮಾದ್ವಾರಕನಾಥ 11



ಸುತ್ತ-ಮುತ್ತ 13

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಮೈಸೂರು ಅಸೋಸಿಯೇಷನ್ನಿನ 51ನೇ ವಾರ್ಷಿಕ ಸಂಗೀತೋತ್ಸವ



ಸಂಗೀತೋತ್ಸವದ ಉದ್ಘಾಟನೆಯ ಸಮಯದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಚಂದ್ರಹಾಸಗುಪ್ತ ಅವರು ದೀಪವನ್ನು ಬೆಳಗುತ್ತಿದ್ದಾರೆ. ಜೊತೆಯಲ್ಲಿ ಅಸೋಸಿಯೇಷನ್‌ನ ಅಧ್ಯಕ್ಷರು ಶ್ರೀ ದೊರೆಸ್ವಾಮಿ, ಶ್ರೀಮತಿ ಪುಷ್ಪಾ ರಾವ್ ಮತ್ತು ಕಾರ್ಯದರ್ಶಿ, ಶ್ರೀ ಮ. ನಾ. ಪ್ರಸಾದ್.

ಪ್ರತೀ ವರ್ಷದಂತೆ, ಈ ವರ್ಷವೂ ಅಸೋಸಿಯೇಷನ್ನಿನಲ್ಲಿ ಶ್ರೀ ಸ್ವರ್ಣಗೌರಿ ಮತ್ತು ಶ್ರೀಮಹಾಗಣಪತಿ ಪೂಜೆಯ ಸಂದರ್ಭದಲ್ಲಿ ವಾರ್ಷಿಕ ಸಂಗೀತೋತ್ಸವವನ್ನು ಏರ್ಪಡಿಸಲಾಗಿತ್ತು. ಈ ವರ್ಷದ 51ನೆಯ ವಾರ್ಷಿಕ ಸಂಗೀತೋತ್ಸವವನ್ನು, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜೊತೆಗೂಡಿ ದಿನಾಂಕ 3-9-2000ದಿಂದ 10-9-2000ದ ವರೆಗೆ ಏರ್ಪಡಿಸಲಾಗಿತು. ಮೊದಲನೆಯ ದಿನ 3-9-2000ರಂದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತರವರು ಉತ್ಸವವನ್ನು ಉದ್ಘಾಟಿಸಿದರು. ಅಂದು ಶ್ರೀಮತಿ ನಾಗಮಣಿ ಶ್ರೀನಾಥ್‌ರವರ ಸಂಗೀತ ಕಛೇರಿಯಾಯಿತು.

ಶ್ರೀ ಪ್ರಸಾದ್‌ರವರು ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು. ಶ್ರೀಮತಿ ನಾಗಮಣಿ ಶ್ರೀನಾಥ್‌ರವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಸಂಗೀತ ಶಿಕ್ಷಕಿಯಾಗಿದ್ದಾರೆ. ಈಕೆ ತನ್ನ ಶಾರೀರ ಪರಿಶ್ರಮ ಸೂಕ್ಷ್ಮ ತಾಳಜ್ಞಾನ ಮನೋಧರ್ಮ ಹಾಗೂ ಪರಂಪರೆಯಿಂದ ಒದಗಿದ ಸಂಸ್ಕೃತಿಯಿಂದ ತನ್ನದೇ ಒಂದು ಸ್ಥಾನವನ್ನು ಗಳಿಸಿದ್ದಾರೆ. ಜೋಡಿ ಗುಬ್ಬಿಯಲ್ಲಿ ಜನ್ಮ ತಳೆದ ಈಕೆ ತಮ್ಮ ಒಂಭತ್ತನೆಯ ವಯಸ್ಸಿನಿಂದಲೇ ಕಛೇರಿಗಳನ್ನು ಕೊಡುತ್ತಿದ್ದಾರೆ. ಡಿ. ಶ್ರೀ ರಮಾನಂದ ಕೃಷ್ಣನ್‌ರವರ ಶಿಷ್ಯೆ. ಇವರಿಗೆ ಗಾನ ಸರಸ್ವತಿ, ರಾಜ್ಯೋತ್ಸವ ಪ್ರಶಸ್ತಿ, ಮದ್ರಾಸಿನ ಮ್ಯೂಸಿಕ್ ಅಕಾಡೆಮಿ ಪ್ರಶಸ್ತಿ, ಅನೇಕ ಬಿರುದುಗಳು ಸಂದಿವೆ. ಸ್ವಂತ ರಚನೆಗಳನ್ನೂ ಮಾಡಿದ್ದಾರೆ.

ಕಾರ್ಯಕ್ರಮವನ್ನು ಹೆಚ್ಚಾಗಿ ಕನ್ನಡ ರಚನೆಗಳಿಗೇ ಮೀಸಲಿಡುತ್ತೇನೆ ಎಂದು ಎಲ್ಲರಿಗೂ ವಂದಿಸಿ ವಾಡಿಕೆಯಂತೆ ಗಣಪತಿಯ ಸ್ತೋತ್ರದಿಂದ ಆರಂಭಿಸಿ ಪುರಂದರದಾಸರ ''ಗಜವದನ ಬೇಡುವೆ'' ಎಂಬ ಕೃತಿಯನ್ನು ಹಾಡಿದರು. ತ್ಯಾಗರಾಜರ ಒಂದೆರಡು ಕೃತಿಗಳನ್ನು ಹೇಳಿದರು. ಸದಸ್ಯೆಯೊಬ್ಬರ ಕೋರಿಕೆಯ ಮೇರೆಗೆ ಕನಕದಾಸರ ಕೃಷ್ಣನ್ನ ಕುರಿತು ''ಬಂಟನಾಗಿ ಬಾಗಿಲ ಕಾಯುವೆ...'' ಎಂಬುದನ್ನು ಹೇಳಿದರು. ರಾಗ ಮಾಧುರ್ಯ, ಭಾವುಕತೆ ಶ್ರೋತೃಗಳ ಕಣ್ಣಾಲಿಗಳು ತುಂಬಿ ಬಂದವು. ಭಾವ ಪರವಶರಾಗಿ ಹಾಡಿದರು.




ಹಿಂದೂಸ್ಥಾನಿ ಶೈಲಿಯಲ್ಲಿ ಕಛೇರಿ ನೀಡುತ್ತಿರುವ ಕುಮಾರಿ ಮೌನ ರಾಮಚಂದ್ರ



ಸಂಗೀತೋತ್ಸವದ ಮೊದಲ ದಿನ ಶ್ರೀಮತಿ ನಾಗಮಣಿ ಶ್ರೀನಾಥ್ ಅವರು ಹಾಡುತ್ತಿರುವುದು.

ಕಾನಡ, ಹಿಂದೋಳ, ಷಣ್ಮುಖಪ್ರಿಯ ಕಲ್ಯಾಣಿ ಮೊದಲಾದ ರಾಗಗಳಲ್ಲಿ ಮನಮುಟ್ಟುವಂತೆ ಅನೇಕ ದಾಸರುಗಳ ವಿರಚಿತ ಕೃತಿಗಳನ್ನು ಹಾಡಿದರು. ಕನ್ನಡದಲ್ಲಿ ''ತಿಲ್ಲಾನ''ಗಳು ಅಷ್ಟಾಗಿ ಇಲ್ಲ. ಇವರು ತಮ್ಮ ಸ್ವಂತ ರಚನೆಯ ''ತಿಲ್ಲಾನ'' ಕನ್ನಡದಲ್ಲಿ ರಚಿಸಿ ಹೇಳಿದರು.

ಮಂಗಳಶ್ಲೋಕದ ಮೊದಲು ಅಸೋಸಿಯೇಷನ್ನಿನ ಪದಾಧಿಕಾರಿಗಳಿಗೆ ವಂದಿಸಿ ಕಾರ್ಯಕ್ರಮವನ್ನು ಮುಗಿಸಿದರು.

ಇವರೊಡನೆ ಪಕ್ಕವಾದ್ಯದಲ್ಲಿ ಮೈಸೂರು ಆರ್. ದಯಾಕರ್ ಪಿಟೀಲು, ಶ್ರೀ ಚಂದ್ರಶೇಖರ ಮತ್ತು ಕಾಶಿನಾಥ್ ಕಂಜಿರ ಮೃದಂಗವನ್ನು ನುಡಿಸಿದರು.

ದಿನಾಂಕ 4ರಂದು ಅಂದರೆ ಉತ್ಸವದ ಎರಡನೆಯ ದಿನ ಕುಮಾರಿ ಮೌನ ರಾಮಚಂದ್ರ ಅವರು ಹಿಂದೂಸ್ಥಾನಿ ಶೈಲಿಯಲ್ಲಿ ಸಂಗೀತ ಕಛೇರಿಯನ್ನು ನಡೆಸಿಕೊಟ್ಟರು. ಇವರು ಮೊದಲು ಪಂಡಿತ ಶೇಷಾದ್ರಿ ಗವಾಯಿಯವರಲ್ಲಿ ಕಲಿತು ನಂತರ ಹುಬ್ಬಳ್ಳಿಯ ಅರ್ಜುನ್ ಸಾ ನಾಕೋಡಾ ಅವರಲ್ಲಿ ಮುಂದುವರೆಸಿದರು. ಮೌನ ಅನೇಕ ವೇದಿಕೆಗಳಲ್ಲಿ




*ಹಿಂದೂಸ್ತಾನಿ ಸಂಗೀತ ಶೈಲಿಯಲ್ಲಿ ಕಚೇರಿ ನೀಡುತ್ತಿರುವ ಶ್ರೀ ಮಹೇಶ್ ಕುಲಕರ್ಣಿ.*

ಹಾಡಿದ್ದಾರೆ ಮತ್ತು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಆಗಾಗ್ಗೆ ಇವರ ಕಾರ್ಯಕ್ರಮ ಇರುತ್ತದೆ. ಅಸೋಸಿಯೇಷನ್ನಿನಲ್ಲಿ ಇದು ಎರಡನೆಯ ಬಾರಿ. ಮೌನ ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಪದವೀಧರೆ. ಮೌನನ ಶೈಲಿ ಸರಳವಾದದ್ದು ಮತ್ತು ಸಂಗೀತದ ಮಾಧುರ್ಯ ಮನ ಮುಟ್ಟುವಂತದ್ದು. ಅಂದು ಹಾಡಿದ ಪುರಿಯ ಕಲ್ಯಾಣ, ಜೋಗ್ ಮತ್ತು ಸರಸ್ವತಿ ಬಹಳ ಪ್ರಭಾವಿತವಾಗಿದ್ದವು. ''ಜೈಶಿವ ಶಂಕರ ಜೈಗಂಗಾಧರ '' ಮತ್ತು ''ಮನಸ್ಸು ಕರಗದೆ'' ಬಹಳ ಚೆನ್ನಾಗಿ ಮೂಡಿ ಬಂದವು. ಅವರ ಜೊತೆಯಲ್ಲಿ ಅಜಯ್ ಜೋಗಲೇಕರ್ ಹಾರ್ಮೋನಿಯಂ, ರಾಜೇಂದ್ರ ನಕೋಡ್ ತಬಲ ಮತ್ತು ಪ್ರಕಾಶ್ ನಾಯಕ್ ತಂಬುರ ನುಡಿಸಿದರು.

ಉತ್ಸವದ ಮೂರನೆಯ ದಿನ ಶ್ರೀ ಮಹೇಶ್ ಕುಲಕರ್ಣಿಯವರು ಹಿಂದೂಸ್ತಾನಿ ಶೈಲಿಯಲ್ಲಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇವರು ತಮ್ಮ ತಂದೆ ಹಾಗೂ ಖ್ಯಾತ ಗಾಯಕರಾದ ಶ್ರೀ ಎನ್. ಕೆ. ಕುಲಕರ್ಣಿಯವರಲ್ಲಿ ಪ್ರಾರಂಭಿಸಿ ನಂತರ ಬೆಳಗಾವಿನ ಪಂಡಿತ ಬಿ.ವಿ. ಕಡ್ಪಾಸ್ಕರ್ ಹಾಗೂ ಪುಣೆಯ ಉಷಾತಾಯಿ ಚಿಪ್ಪಲ ಕಟ್ಟಿ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದರು.

ಕಿರಾಣ, ಘರಾಣ ಶೈಲಿಯ ಗಾಯಕರಾದ ಮಹೇಶ್ ಅನೇಕ ಸ್ಥಳಗಳಲ್ಲಿ ಹಾಡಿ ಮನ ರಂಜಿಸಿದ್ದಾರೆ ಮತ್ತು ಅನೇಕ ಬಹುಮಾನಗಳನ್ನು ಪಡೆದಿದ್ದಾರೆ.

''ಮಿಶ್ರಕಮಾಚ್'' ರಾಗದಲ್ಲಿ ''ಬಿ.ವಿ. ಕಂಡೂಸ್ಕರ್'ರವರ ಕೃಷ್ಣನ ಕುರಿತ ಕೃತಿಯನ್ನು ಹಾಡಿದರು. ನಂತರ ''ಜಯ ಜಯ ಗಜಾನನ'' ಎಂಬ ಗಣೇಶನ ಸ್ತುತಿಯೊಂದಿಗೆ ಭಕ್ತಿಗೀತೆಗಳನ್ನು ಹಾಡಿದರು. ರಾಘವೇಂದ್ರ ಸ್ವಾಮಿಗಳ'' ವೀಣೆಯ ನುಡಿಸಿದರು'' ಎಂಬ ಕೃತಿಯನ್ನು ಹಾಡಿದರು. ಗದುಗಿನ ಏಕ್ನಾಂಡಿ ಸ್ವಾಮಿಗಳು ರಚಿಸಿದ ಬರ್ತೀರಾ ಇಲ್ಲೇ ಇರ್ತೀರಾ ಎನ್ನುವ ತತ್ವಭರಿತ ಹಾಡನ್ನು ಹಾಡಿದರು. ಕಂಡೆ ಪಂಡರಿರಾಯನ ಎಂಬ ಅಭಂಗ ಮತ್ತು ಒಂದು ಭಜನೆಯೊಂದಿಗೆ ಕಾರ್ಯಕ್ರಮವನ್ನು ಮುಗಿಸಿದರು. ಇದರೊಂದಿಗೆ ಪ್ರಕಾಶ್ ಚಿಟ್ನಿಸ ಹಾರ್ಮೋನಿಯಂ, ವಿನಾಯಕ - ತಬಲ, ಅಮೃತ ತಂಬುರವನ್ನು ನುಡಿಸಿರು.

ಉತ್ಸವದ ನಾಲ್ಕನೆಯ ದಿನ ಬೆಂಗಳೂರಿನ ಶ್ರೀ ಆರ್. ಕೆ. ಪದ್ಮನಾಭ ಮತ್ತು ಶ್ರೀ ಡಿ.ವಿ. ನಾಗರಾಜ್'ರವರು ಕರ್ನಾಟಕ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಆರ್. ಕೆ. ಪದ್ಮನಾಭ್'ರವರು ಹೆಸರಾಂತ ಸಂಗೀತ ಮನೆತನದಿಂದ ಬಂದವರು. ಇವರಿಗೆ ''ಸಂಗೀತ ಸೇವಾಶಿರೋಮಣಿ'', ''ಗೋಷ್ಠಿ ಗಾಯನ ಕಲಾಚೇತನ'', ''ರಂಗ ಸಂಗೀತ ರತ್ನ'' ''ವಾದಿರಾಜ ಕೃತಿಗಾನ ರತ್ನ ವಿಶಾರದ'' ಮೊದಲಾದ ಅನೇಕ ಬಿರುದುಗಳಿವೆ. ಇವರು ವಾದಿರಾಜರ ಕೃತಿಗಳ ಕುರಿತು ಸಂಶೋಧನೆ ಮಾಡುತ್ತಿದ್ದಾರೆ. ವಾದಿರಾಜರು, ತ್ಯಾಗರಾಜರು ಪುರಂದರದಾಸರುಗಳಿಗಿಂತ ಹಿಂದಿನವರಾದರೂ ಅವರ ಕೃತಿಗಳು ಅಷ್ಟಾಗಿ ಪ್ರಚಲಿತವಾಗಿಲ್ಲ. ಈ ಕಾರ್ಯವನ್ನು ಶ್ರೀ ಪದ್ಮನಾಭರವರು ಮಾಡುತ್ತಿದ್ದಾರೆ. ಇವರು ತಮ್ಮ ಕಾರ್ಯಕ್ರಮದಲ್ಲಿ ''ತೇರ ಏರಿ ಬಂದಾ...'' ಎಂಬ ವಾದಿರಾಜರ ಕೃತಿಯನ್ನು ಹಾಡಿದ ನಂತರ, ಬಹುಶಃ

**PROGRAMMERS IN OCTOBER & NOVEMBER 2000**

On Saturday, 14th October 2000, at 7.00 p.m

Karnatic Vocal Concert by
**Vidwan Shri B. Vijaya Raghavan**
from Mysore
Disciple of
**Vidwan Shri B. Devendrappa.**

On 11th & 12th November 2000.

## "MASTI FESTIVAL"

A Festival paying tributes to
**Masti Venkatesha Iyengar**
Well Known Kannada writer and
Gyan Pet Award winner Organized by
**Masti Adhyayana Peetha, Bangalore**
**The Mysore Association, Bombay and**
**The Department of Kannada, Bombay University**
And
**Karnaraka Sahitya Academy, Bangalore**

On 11th November 2000, at 5.00 p.m.
Inauguration of the Festival
Keynote address

**"BENDAKALOORU"**
a play based on Masti's short story
Presented by The Fine Arts Section of
The Mysore Association, Bombay.

On 12th November 2000, at 10.30 a.m.
Seminar on Masti's
works Speakers:
**Prof. M. Ramachandra Karkala**
**Prof. Taltaje Vasanth Kumar, Mumbai.**
**Dr. K.V. Narayana, Hampi**
**Dr. G.M. Hegde, Dharwar.**
Screening of Masti's Short Stories.

**VALEDICTORY FUNCTION**

On Saturday, 25th November 2000,
at 7.00 p.m.

**"GUMMA"**
A Children's play in Kannada, Presented by
The Fine Arts Section of
The Mysore Association, Bombay.

**Venue :**
The Mysore Association Auditorium,
393, Bhaudaji Road,
Matunga,
Mumbai-400019.

*All are cordially invited*

ಪರಿಚಯ

ಕಳೆದ ಅರ್ಧ ಶತಮಾನದಿಂದ ನಡೆದು ಬರುತ್ತಿರುವ ಮೈಸೂರು ಅಸೋಸಿಯೇಷನ್ನಿನ ಸಂಗೀತೋತ್ಸವಗಳಲ್ಲಿ ಕರ್ನಾಟಕ ಮತ್ತು ಹಿಂದೂಸ್ತಾನಿ ಶೈಲಿಯ ಅನೇಕ ಖ್ಯಾತ ಕಲಾವಿದರು ಮತ್ತು ಪ್ರತಿಭಾವಂತ ಯುವಕ/ಯುವತಿಯರೂ ಭಾಗವಹಿಸುತ್ತಾ ಬಂದಿದ್ದಾರೆ. ಈ ವರ್ಷದ ಉತ್ಸವದಲ್ಲಿ ಪಾಲ್ಗೊಂಡ ಶ್ರೀ ಪರಮೇಶ್ವರ ಹೆಗಡೆಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಆದ ಪರಿಚಯ.

ಆದರೆ ಅತಿಶೀಘ್ರದಲ್ಲಿಯೇ ಅವರು ಅವರ ಪೂರ್ತಿ ಸಮಯವನ್ನು ಸಂಗೀತಕ್ಕೆ ಮೀಸಲಾಗಿಟ್ಟು ಈ ಕೆಲಸವನ್ನು ಬಿಟ್ಟು ಬಿಡುತ್ತೇನೆ ಎಂದು ತಿಳಿಸಿದರು.

ಪ್ರಸ್ತುತ ಬೆಂಗಳೂರಿನ ಪ್ಯಾಲೇಸ್ ಗುಟ್ಟಹಳ್ಳಿಯ ಹ್ಯೆಯ್ಯರ್ ಸೆಕೆಂಡರಿ ಶಾಲೆಯಲ್ಲಿ ಸಂಗೀತ ಕಲಿಸುತ್ತಿದ್ದಾರೆ. ಹೆಗಡೆಯವರು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಕಾರ್ಯಕ್ರಮ ನೀಡುತ್ತಾ ಬಂದಿದ್ದಾರೆ. 1999ರಲ್ಲಿ ವಾಷಿಂಗ್‌ಟನ್ ವಿಶ್ವ ವಿದ್ಯಾಲಯದಲ್ಲಿ ಸುಮಾರು 2½ ತಿಂಗಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಈ ತಿಂಗಳ ಕೊನೆಗೆ ಗಲ್ಫ್ ಹಾಗೂ ಲಂಡನ್ನಿನಲ್ಲಿ 15 ದಿನದ ಕಾರ್ಯಕ್ರಮ ನೀಡುವವರಿದ್ದಾರೆ. ಸಂಗೀತಕ್ಕೆ ಭಾಷೆಯಿಲ್ಲ. ಹೃದಯಕ್ಕೆ ನಾಟುವಂತಹುದು ಎನ್ನುವ ಈತ ತಮ್ಮ ಗುರುಗಳ ಹೆಸರಿನಲ್ಲಿ 'ರಾಜ ಗುರು ಸಂಸ್ಥೆಯ ಮೂಲಕ ಪ್ರತಿ ವರ್ಷದ 2 ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಹೆಗಡೆಯವರ ಸಂಗೀತ ಸೇವೆಗೆ ನೇಸರುವಿನ ಶುಭ ಹಾರೈಕೆ.

ಕರ್ನಾಟಕ ಮತ್ತು ಹಿಂದೂಸ್ತಾನಿ ಶೈಲಿಗಳ ಬಗ್ಗೆ ಮಾತನಾಡುತ್ತಾ, ಕರ್ನಾಟಕದ ಸಂಗೀತದಲ್ಲಿ ತಾಳಕ್ಕೆ ಒತ್ತು ಹೆಚ್ಚು. ಆದರೆ ಹಿಂದೂಸ್ತಾನಿ ರೀತಿಯಲ್ಲಿ ಹಾಗಲ್ಲ. ತಾಳಕ್ಕೆ ತಬಲವಾದಕರಿರುತ್ತಾರೆ. ಆ ತಾಳದ ಚೌಕಟ್ಟಿನಲ್ಲಿ ಗಾಯಕರಿಗೆ ರಾಗವನ್ನು ಹೇಗೆಬೇಕೋ ಹಾಗೆ ವಿಸ್ತರಿಸುವ ಸ್ವಾತಂತ್ರವಿದೆ. ರಾಗ ಎಲ್ಲರ ಮನಮುಟ್ಟುತ್ತದೆ. ಆದರೆ ತಾಳದ ಪ್ರಭಾವ ಬುದ್ಧಿಯ ಮೇಲೆ ಎಂದು ತಿಳಿಸಿದರು.

ಹೆಗಡೆಯವರ ಸಂಗೀತ ಸೇವೆಗೆ ನೇಸರುವಿನ ಶುಭಾಶಯಗಳು.



*ವಿದ್ವಾನ್ ಆರ್. ಕೆ. ಪದ್ಮನಾಭ್ ಹಾಗೂ ವಿದ್ವಾನ್ ಡಿ.ವಿ. ನಾಗರಾಜ್ ಅವರಿಂದ ಸಂಗೀತ ಕಚೇರಿ.*

ತ್ಯಾಗರಾಜರು ಈ ಹಾಡಿನಿಂದ ಪ್ರಭಾವಿತರಾಗಿ ''ರಾಜುವೆಡಲೆ...'' ಎಂಬ ಕೃತಿಯನ್ನು ರಚಿಸಿರಬಹುದು ಎಂದರು. ಇವರು ವಾಸುದೇವಾಚಾರ್ಯರ ಇನ್ನೂರು ಕೃತಿಗಳನ್ನು ಧ್ವನಿ ಸುರುಳಿಯ ರೂಪದಲ್ಲಿ ಹೊರ ತಂದಿದ್ದಾರೆ.

ಶ್ರೀ ಡಿ.ವಿ. ನಾಗರಾಜ್‌ರವರು ''ವಿಜಯ ಸಂಗೀತ ಶಾಲೆ''ಯ ಶ್ರೀ ಕೃಷ್ಣಮೂರ್ತಿ ಹಾಗೂ ವಿದ್ವಾನ್ ಶ್ರೀ ವೆಂಕಟರಾಮಯ್ಯ ಅವರಲ್ಲಿ ಶಿಷ್ಯತ್ವವಹಿಸಿ ಕಲಿತಿದ್ದಾರೆ. ಸ್ವ ಇಚ್ಛೆಯಿಂದ ನಿವೃತ್ತಿ ಹೊಂದಿ ಸಂಗೀತ ಕ್ಷೇತ್ರಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಇವರದು ಶಾಸ್ತ್ರೀಯ ಸಂಗೀತದಲ್ಲಿ ಹೆಸರಾಂತ ಜೋಡಿ, ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ಕಾರ್ಯಕ್ರಮಗಳನ್ನು ನೀಡಿ ಜನಮನ್ನಣೆಗಳಿಸಿದ್ದಾರೆ, ದೇವರ ನಾಮಗಳಲ್ಲಿ ಅದರ ಪವಿತ್ರತೆ, ಧಾತುಗಳಿಗೆ ಹಾಡಿನಷ್ಟೇ ಗಮನ ನೀಡುತ್ತಾರೆ. ಹರಿದಾಸ ಪ್ರಚಾರ ಪೀಠದವರು ಈ ಗಾಯಕದ್ವಯರಿಗೆ ''ಸಂಗೀತ ಕಲಾನಿಧಿ'' ಎಂಬ ಬಿರುದಿತ್ತು ಸನ್ಮಾನಿಸಿದ್ದಾರೆ.

ಇವರು ವರ್ಣದಿಂದ ಕಾರ್ಯಕ್ರಮವನ್ನು ಶುರುಮಾಡಿ, ವಾಡಿಕೆಯಂತೆ ಗಣಪನಿಗೆ ವಂದಿಸಿ ಮುಂದು ವರೆಸಿದರು. ಪುರಂದರದಾಸರ ''ಬಂದನೇ ರಂಗ....'' ''ಮನವ ಶೋಧಿಸಬೇಕು ನಿತ್ಯ'' ಎಂಬ ಕೃತಿಯನ್ನು ಮನಶುದ್ಧಿ ಇಲ್ಲದವಗೆ..... ಎಂಬ ಉಗಾಭೋಗದಿಂದ ಆರಂಭಿಸಿ ಹೇಳಿದರು.

ಇವರಿಗೆ ಪಕ್ಕವಾದ್ಯದಲ್ಲಿ ಶ್ರೀ ಬಿ. ಎಸ್.ರಘುರಾಂ



*ಸತತ 50 ವರ್ಷಗಳಿಂದ ಅಸೋಸಿಯೇಶನ್‌ನ ಸಂಗೀತೋತ್ಸವದಲ್ಲಿ ಹಾಡುತ್ತಿರುವ ಶ್ರೀಮತಿ ವಿಜಯಲಕ್ಷ್ಮಿ ನಾಥನ್ ಅವರಿಗೆ ಸನ್ಮಾನ ಶ್ರೀ ಚಂದ್ರಹಾಸಗುಪ್ತ ಅವರಿಂದ.*



ಶ್ರೀಮತಿ ವಿಜಯಲಕ್ಷ್ಮಿ ನಾಥನ್ ಹಾಗೂ ಶಿಷ್ಯೆಯವರಿಂದ ಸಂಗೀತ ಕಚೇರಿ.

ಪಿಟೀಲ ಹಾಗೂ ಎನ್. ರವಿ ಮೃದಂಗ ನುಡಿಸಿದರು. ಪೂರ್ತಿ ಕಛೇರಿಯನ್ನು ಕನ್ನಡ ಕೃತಿಗಳಿಂದಲೇ ನಡೆಸಿ, ರಸಿಕರ ಮೆಚ್ಚುಗೆ ಪಡೆಯಿತು. ಅಂದಿನ ಇವರಿಬ್ಬರ ಕಾರ್ಯಕ್ರಮ.

ಉತ್ಸವದ ಐದನೆಯ ದಿವಸ ಶ್ರೀಮತಿ ವಿಜಯಲಕ್ಷ್ಮಿ ನಾಥ'ನ್'ರವರು ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ವಿಜಯಲಕ್ಷ್ಮಿ ನಾಥನ್ ರವರು ಸಂಗೀತ ಮನೆತನಕ್ಕೆ ಸೇರಿದವರು, ಇವರು ತಮ್ಮ ಶಿಕ್ಷಣವನ್ನು ತಮ್ಮ ತಂದೆ ತಾಯಿಯರಲ್ಲೆ (Sri A.N.V. Iyer & Smt. Iyer) ಪ್ರಾರಂಭಿಸಿ ನಂತರ ಅಣ್ಣಾ ಮಲೈ ವಿಶ್ವವಿದ್ಯಾನಿಲಯದ ಶ್ರೀ ಕೃಷ್ಣಸ್ವಾಮಿಯವರಲ್ಲಿ ಮುಂದುವರೆಸಿದರು. ಇವರು ತಮ್ಮ ಚಿಕ್ಕ ವಯಸ್ಸಿನಿಂದಲೇ ಕಚೇರಿಗಳನ್ನು ನಡೆಸುತ್ತಿದ್ದಾರೆ. ಇವರು ಶಿಷ್ಯರನೇಕರು ಬಹಳ ಪ್ರಗತಿಯನ್ನು ಸಾಧಿಸಿದ್ದಾರೆ. ಶ್ರೀಮತಿ ವಿಜಯಲಕ್ಷ್ಮಿ ನಾಥನ್‌ರವರು ಕಳೆದ 50 ವರ್ಷಗಳಿಂದ ನಮ್ಮ ಅಸೋಸಿಯೇಷನ್ನಿನ ಗಣಪತಿಯ ಸೇವೆ ಸಲ್ಲಿಸುತ್ತಿದ್ದಾರೆ. ಉತ್ಸವದ ಮೊದಲನೆಯ ದಿನ ಅವರ ವಿಶಿಷ್ಟ ಸೇವೆಗೆ ಅವರನ್ನು ಸನ್ಮಾನಿಸಲಾಯಿತು.

ವರ್ಣದಿಂದ ಕಛೇರಿಯನ್ನು ಆರಂಭಿಸಿ, ಗಣಪತಿಯ ಸ್ತುತಿಯನ್ನು ಹೇಳಿದರು. ನಂತರ ''ಮಾತಂಗಿ ರಾಜರಾಜೇಶ್ವರಿ '' ಎಂಬ ದೀಕ್ಷಿತರ ಕೃತಿ, ''ಲಾಲಿಸಿದಳು ಮಗನ...'' ಎಂಬ ಪುರಂದರದಾಸರ ಕೃತಿ.... ನಂತರ ಭಕ್ತಿ ರಸವೇ ಪ್ರಧಾನವಾಗಿರುವ ''ಭೈರವಿ''ಯಲ್ಲಿ ''ಬಾರಯ್ಯ ವೆಂಕಟರಮಣ...'' ಎಂದು ಪರಮಾತ್ಮನನ್ನು ತನ್ನ ಹತ್ತು ಅವತಾರಗಳಲ್ಲೂ ಬಾ ಎಂದು ಕರೆಯುತ್ತಾರೆ. ಇದು ಪುರಂದರದಾಸರ ಕೃತಿ. ಹೀಗೇ ಇನ್ನು ಅನೇಕ ಭಕ್ತಿ ಗೀತೆಗಳನ್ನು ತಮಿಳು, ಹಿಂದಿ, ಕನ್ನಡ ಎಲ್ಲ ಭಾಷೆಗಳಲ್ಲೂ ಹೇಳಿದರು.

ಇವರೊಡನೆ ಕುಮಾರಿ ಶೀಲಾರಾಜು ಸಹಗಾಯನ ನೀಡಿದರು. ಶ್ರೀ ಬಾಲಕೃಷ್ಣ ಪಿಟೀಲು ಹಾಗೂ ಶ್ರೀ ಶ್ರೀಧರ ಪಾರ್ಥಸಾರಥಿ ಮೃದಂಗ ನುಡಿಸಿದರು.

ಉತ್ಸವದ ಆರನೆಯ ದಿನ ಶ್ರೀ ಪರಮೇಶ್ವರ ಹೆಗ್ಡೆಯವರು ಹಿಂದೂಸ್ತಾನಿ ಶೈಲಿಯಗಾಯನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇವರು ಕರ್ನಾಟಕದ ಉತ್ತರ ಕನ್ನಡದವರು. ಚಿಕ್ಕ ವಯಸ್ಸಿನಿಂದ ಇವರಿಗೆ ಸಂಗೀತದ ಒಲವು. ಚಿಕ್ಕ ವಯಸ್ಸಿನಲ್ಲಿ ಶ್ರೀ ಎಸ್. ಎಮ್. ಭಟ್ ಹಾಗೂ ಚಂದ್ರಶೇಖರ್ ಪುರಾಣಿಕ್‌ಮಠ್ ಅವರಲ್ಲಿ ಅಭ್ಯಸಿಸಿ ಹೆಚ್ಚಿನ


ಮಾನ್ಯ ಮಿತ್ರರಾದ ಪ್ರಸಾದರವರೆ,

ನೀವು ಪ್ರೇಮ ಪೂರ್ವಕವಾಗಿ ಕಳುಹಿಸಿದ 'ನೇಸರು' ಸಿಕ್ಕಿತು. ಓದಿ ಖುಷಿಯಾಯಿತು. ಆಕರ್ಷಕವಾದ ಸಜ್ಜೆ,ಸುಂದರವಾದ ಅಕ್ಷರಗಳ ಮುದ್ರಣ, ಬೇಕಾದಷ್ಟೆ ಹಾಕಿದ ಸಮಯೋಚಿತ ಭಾವಚಿತ್ರಗಳಿಂದ ಒಡಗೂಡಿದ ನಿಮ್ಮ ಸಂಚಿಕೆ ನಿಜಕ್ಕೂ ಮುಂಬಯಿ ಕನ್ನಡಿಗರ ತಿಂಗಳೋಲೆ ಆಗಿದೆ.

ನಿಮ್ಮ ಇಗನೇ ಗಣಪತಿ - ಗೌರಿ ಹಬ್ಬದಲ್ಲಿ ಅನಾರೋಗ್ಯದ ಮೂಲಕ ಕೇವಲ ಮೌನ ರಾಮಚಂದ್ರ ಮತ್ತು ಹೆಗಡೆಯವರಷ್ಟೇ ಕಚೇರಿ ಕೇಳಿ ಆನಂದಪಟ್ಟೆ. ಆರು ವರ್ಷಗಳ ನಂತರದ ಮೌನ ನಿಜಕ್ಕೂ ಆಲಿಸುವವರನ್ನು 'ಮೂಕ'ರಾಗಿ ಮಾಡುವ ಸಾಮರ್ಥ್ಯ ಅವಳಲ್ಲಿದೆ! ಇನ್ನೆರಡು ವರ್ಷಗಳ ತಯಾರಿಯ ನಂತರ ಆಕೆ ಹಿಂದೂಸ್ತಾನಿ ಸಂಗೀತದಲ್ಲಿ ಜಯಭೇರಿ ಹೊಡೆಯಲು ಉಜ್ವಲ ಭವಿಷ್ಯವಿದೆ ಎಂದು ಎದೆ ತಟ್ಟಿ ಹೇಳಬಲ್ಲೆ. ಅವಳ ಗಾಯನಕ್ಕೆ ಒಳ್ಳೆಯ Format ಇದೆ. ಇನ್ನೂ ಪರಮೇಶ್ವರರ ಸಂಗೀತ was truly spirited and spontaneous. ನಾನು ಅವರ ತುಂಬ ಕಚೇರಿ ಕೇಳಿದ್ದರೂ ನಿಮ್ಮಲ್ಲಿ ಹಾಡಿದ ಪರಮೇಶ್ವರರ ಗಾಯನ ಅದ್ಭುತವಾಗಿತ್ತು. ಹಿಂದೆ ಬಸವರಾಜು, ಗಣಪತಿ ಭಟ್ಟ ಇವರ ಸಂಗೀತ ವಿಮರ್ಶೆ Times ದಲ್ಲಿ ಮಾಡುವ ಅವಕಾಶ ಸಿಕ್ಕುತ್ತಾ ಇತ್ತು. ಇದೀಗ ಇಂತಹ ದಿನ ಪತ್ರಿಕೆಗಳು ''ಪೋರ್ಟ ಟಾಯಿಮ್ಸ್'' ಆಗಿವೆ ! ನೇಸರು ಸಂಬಂಧ ಇಂಥ ಮಾಸಪತ್ರಿಕೆಗಳೇ ಸಂಗೀತ ಕಲೆಗೆ ಮತ್ತಿತರ ಲಲಿತ ಕಲೆಗಳಿಗೆ ಮೀಸಲಾಗಿದ್ದು ಸಂತೋಷ.

ಇತಿ

-- ಪ್ರಕಾಶ್ ಬುರ್ಡೆ




ಸಂಗೀತೋತ್ಸವದ ಆರನೆಯ ದಿನ ಶ್ರೀ ಪರಮೇಶ್ವರ ಹೆಗಡೆ ಅವರು ಸಂಗೀತ ಕಚೇರಿ ನಡೆಸುತ್ತಿರುವುದು.

ಅಭ್ಯಾಸವನ್ನು ಧಾರವಾಡದ ಶ್ರೀ ಬಸವರಾಜ್ ರಾಜ್‌ಗುರು ಅವರಲ್ಲಿ ಮಾಡಿದರು. ಇವರ ಗುರುಗಳು ಬಹು ವಾತ್ಸಲ್ಯದಿಂದ ಉತ್ತಮ ಕೃತಿಗಳನ್ನು ಇವರಿಗೆ ಕಲಿಸಿದ್ದಾರೆ. ಇವರು ಅನೇಕ ಸಂಗೀತೋತ್ಸವಗಳಲ್ಲಿ ಪಾಲ್ಗೊಂಡಿದ್ದಾರೆ.

ಇವರು ''ಬನಲಾಕೆ ಸ್ಟಾಂ ಚ್...'' ಎಂಬ ಕೃತಿಯಿಂದ ಕಛೇರಿಯನ್ನು ಆರಂಭಿಸಿದರು. ನಂತರ ''ಜೈ ಜೈ ಮಾತಾ ಭವಾನಿ...'' ಎಂಬ ದೇವಿಸ್ತುತಿ. ನಂತರ ವಿನಾಯಕನ ಸ್ತುತಿ, ನಂತರ ಕೆಲವು ಕನ್ನಡ ಕೃತಿಗಳನ್ನು ಹಾಡಿದರು. ವಾದಿರಾಜರ ''ಈತನೀಲೋಕಗುರು....'' ಎಂಬ ಕೃತಿಯಲ್ಲಿ ''ಹನುಮ, ಭೀಮ, ಮಧ್ವರ ಅವತಾರವನ್ನು ವರ್ಣಿಸಿದರು. ಶ್ರೋತೃಗಳ ಕೋರಿಕೆಯ ಮೇರೆಗೆ ಒಂದು ಬಸವೇಶ್ವರ ವಚನವನ್ನು ಹಾಡಿದರು. ಪುರಂದರದಾಸರ ಎರಡು ಕೃತಿಗಳನ್ನು ಹಾಡಿದರು.

ಇವರೊಂದಿಗೆ ಪಕ್ಕವಾದ್ಯದಲ್ಲಿ ಶ್ರೀ ಸುಧೀರ್ ನಾಯಕ್‌ರವರು ಹಾರ್ಮೋನಿಯಂ ನುಡಿಸಿದರು.



ಸಂಗೀತೋತ್ಸವದ ಏಳನೆಯ ದಿನ ಕುಮಾರಿ ಮಾನಸಿ ಪ್ರಸಾದ್ ಅವರಿಂದ ಕರ್ನಾಟಕ ಸಂಗೀತ.

ಇವರು ತುಳಸಿದಾಸ್ ಬೋರ್ಕರ್ ಅವರಲ್ಲಿ ವಿದ್ಯೆಯನ್ನು ಆರಂಭಿಸಿ ಜಿತೇಂದ್ರ ಅಭಿಷೇಕಿರವರ ಮಾರ್ಗದರ್ಶನದಲ್ಲಿ ಹೆಚ್ಚಿನ ಅಭ್ಯಾಸವನ್ನು ಮಾಡಿದ್ದಾರೆ. ಶ್ರೀ ಓಂಕಾರ್‌ನಾಥ್ ಗುಲ್ವಾಡಿಯವರು ತಬಲ ನುಡಿಸಿದರು.

ಉತ್ಸವದ ಏಳನೆಯ ದಿನ ಕುಮಾರಿ ಮಾನಸಿ ಪ್ರಸಾದ್‌ರವರ ಕರ್ನಾಟಕ ಶಾಸ್ತ್ರೀಯ ಸಂಗೀತ. ಕು. ಮಾನಸಿ ಪ್ರಸಾದ್‌ರವರು ತಮ್ಮ ತಾಯಿ ಶ್ರೀಮತಿ ತಾರಾ ಪ್ರಸಾದ್ ಅವರಲ್ಲಿ ಕಲಿಯಲು ಆರಂಭಿಸಿ ನಂತರ ಶ್ರೀಮತಿ ಜ್ಯೋತ್ಸ್ನ ವಿ ಪ್ರಸಾದ್ ಮತ್ತು ಡಾ||




ಶ್ರೀಮತಿ ಸುಶೀಲಾ ಆಚಾರ್ಯ ಹಾಗೂ ತಂಡದವರಿಂದ ಭಕ್ತಿ ಸಂಗೀತ

ವರದರಾಜನ್ ಅವರಲ್ಲಿ ಮುಂದುವರೆಸಿದರು. ಕಳೆದ ಐದು ವರ್ಷಗಳಿಂದ ಶ್ರೀ ಆರ್. ಕೆ. ಪದ್ಮನಾಭ ಅವರಲ್ಲಿ ಕಲಿಯುತ್ತಿದ್ದಾರೆ. ಕೇವಲ ನಾಲ್ಕು ದಿನಗಳ ಅಂತರದಲ್ಲಿ ಗುರು-ಶಿಷ್ಯರ ಕಾರ್ಯಕ್ರಮ ಒಂದೇ ವೇದಿಕೆಯಲ್ಲಿ ನಡೆದಿರುವುದು ಶ್ಲಾಘನೀಯ. ಇವರು ಭರತನಾಟ್ಯವನ್ನು ಅಭ್ಯಸಿಸಿದ್ದಾರೆ. ಇವರಿಗೆ ಸಿಂಗಪೂರ್ ಏರ್‌ಲೈನ್ಸ್‌ನ ''ವಿದ್ಯಾರ್ಥಿವೇತನ'' ದೊರೆತು ಎರಡು ವರ್ಷಗಳ ಕಾಲ ಅಲ್ಲಿ ಅಭ್ಯಸಿಸಿ ಈಗ ಕರ್ನಾಟಕ ಸಂಗೀತವನ್ನು ಮುಂದುವರಿಸಲು ಭಾರತಕ್ಕೆ ಹಿಂದಿರುಗಿದ್ದಾರೆ. ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಪದವಿಗೆ ಓದುತ್ತಿದ್ದಾರೆ.

''ವಿರಾನಾ ಪೈ'' ಎಂಬ ವರ್ಣದಿಂದ ಆರಂಭಿಸಿದರು. ವಾಡಿಕೆಯಂತೆ ಗಣಪತಿಯ ಪ್ರಾರ್ಥನೆ, ನಂತರ ರಾಗ ಮಾಲಿಕೆಯ ''ಆರಭಿರಾಗ ಪ್ರಿಯೆ....'' ಎಂಬ ಕೃತಿಯ ಸಭಿಕರೆಲ್ಲರ ಮೆಚ್ಚುಗೆಗಳಿಸಿತು. ಕಾಂಭೋದಿಯಲ್ಲಿ ''ಕೃಷ್ಣಮೂರ್ತಿ, ಕಣ್ಣಮುಂದೆ'' ಎಂಬ ಪುರಂದರದಾಸರ ಕೃತಿಯಿಂದ ಎಲ್ಲರ ಕಣ್ಣಮುಂದೆ ಕೃಷ್ಣನನ್ನು ನಿಲ್ಲಿಸಿದರು. ಬಹಳ ಭಾವ ಪೂರಕವಾಗಿ ಹಾಡಿದರು. ಚಿಕ್ಕ ವಯಸ್ಸಿಗೆ ಹೆಚ್ಚಿನ ಸಾಧನೆ, ''ಎಂದಿಗಾದರೂ ನಿನ್ನ ಪಾದವೆ ಗತಿ'' ಎಂಬ ದಾಸರರ ಕೃತಿ, ಶೋತೃಗಳ ಕೋರಿಕೆಯ ಮೇರೆಗೆ ಒಂದು ಹಿಂದಿ ಭಜನೆಯನ್ನು ಹಾಡಿದರು. ಪ್ರತಿಭಾವಂತ ಗಾಯಕಿ, ಈಕೆಗೆ ಉತ್ತಮ ಭವಿಷ್ಯವಿದೆ.

ಇವರಿಗೆ ಪಕ್ಕವಾದ್ಯದಲ್ಲಿ ಶ್ರೀ ವಿ. ಆನಂದ್ ರವರು ಪಿಟೀಲು, ಶ್ರೀ ಎಸ್. ಬದರಿ ಮೃದಂಗವನ್ನು ನುಡಿಸಿದರು. ಇವರಿಬ್ಬರೂ ಯುವ ಪೀಳಿಗೆಯ



ಶ್ರೀ ಸ್ವರ್ಣಗೌರಿಗೆ ಸುವಾಸಿನಿಯರು ಮಡಿಲು ತುಂಬಿ ಬೀಳ್ಕೊಡಲು ನೆರೆದಿರುವುದು.



ಶ್ರೀ ಶಂಕರ ಮಠದ ಋತ್ವಿಕ್ಕುಗಳಿಂದ ವೇದ ಘೋಷ.

ತರುಣರು. ಶ್ರೀ ಪ್ರಕಾಶ್‌ನಾಯಕ್‌ರವರು ತಂಬೂರಿಯನ್ನು ಮೀಟಿದರು.

ಉತ್ಸವದ ಕೊನೆಯದಿನ ಬೆಳಿಗ್ಗೆ ಒಂಭತ್ತು ಘಂಟೆಗೆ ಶಂಕರ ಮಠದ ವೈದಿಕರಿಂದ ವೇದ ಘೋಷ, ಗಣಪತಿಗೆ ಪೂಜೆ, ಮಂಗಳಾರತಿ ಎಲ್ಲ ನಡೆಯಿತು. ನಂತರ ಸಭಾ ಭವನದಲ್ಲಿ ಶ್ರೀಮತಿ ಸುಶೀಲ ಆಚಾರ್ಯ ಮತ್ತು ಸಂಗಡಿಗರಿಂದ ಅವರಿಂದ ಭಜನೆ. ಶ್ರೀಮತಿ ಸುಶೀಲಾ ಆಚಾರ್ಯ ಅವರು ಅಸೋಸಿಯೇಷನ್ನಿನಲ್ಲಿ ಸುಶೀಲಕ್ಕ ಎಂದೇ ಎಲ್ಲರಿಗೂ ಚಿರಪರಿಚಿತರು. ಇವರು ಕಳೆದ 25 ವರ್ಷಗಳಿಂದ ಅಸೋಸಿಯೇಷನ್ನಿನಲ್ಲಿ ಹಾಡುತ್ತಿದ್ದಾರೆ. ಇವರು ಸಂಗೀತ ಮನೆತನದಿಂದ ಬಂದಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿತಿದ್ದಾರೆ.




ಶ್ರೀ ಸ್ವರ್ಣಗೌರಿಗೆ ಹಾಗೂ ಶ್ರೀ ಮಹಾಗಣಪತಿ ಆರತಿ ಡಾ. ಎಚ್. ಎಸ್. ಶ್ರೀನಿವಾಸ್ ಅವರಿಂದ.

ಅನೇಕ ಕವನಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಸುಗಮ ಸಂಗೀತ ಹಾಗೂ ಭಕ್ತಿ ಸಂಗೀತಗಳಿಗೆ ಅಪಾರ ಕಾಣಿಕೆ ನೀಡಿದ್ದಾರೆ. ಒಂದು ಘಂಟೆಯಕಾಲ ತಮ್ಮ ಸಂಗಡಿಗರೊಂದಿಗೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಗಣಪತಿ, ಈಶ್ವರ, ಶ್ರೀರಾಮ, ಲಕ್ಷ್ಮೀದೇವಿ ಹೀಗೆ ಎಲ್ಲರ ಕುರಿತು ಭಕ್ತಿ ಗೀತೆಗಳನ್ನು ಹಾಡಿದರು.

ನಂತರ ಕೆಳಗಡೆ ಗೌರಿ ಹಾಗೂ ಗಣಪತಿಗೆ ಮಹಾಮಂಗಳಾರತಿ ಹಾಗೂ ವಿಸರ್ಜನಾ ಕಾರ್ಯಕ್ರಮವಾಯಿತು. ಸದಸ್ಯೆಯರು ಗೌರಮ್ಮನಿಗೆ ಸೋಬಲಕ್ಕಿ ಇಟ್ಟು ಬೀಳ್ಕೊಟ್ಟರು. ಗಣಪತಿಯ ಆವಾಹನೆಯೂ ಸಂಭ್ರಮ, ವಿಸರ್ಜನೆಯು ಇನ್ನೂ ಹೆಚ್ಚಿನ ಸಂಭ್ರಮದಿಂದ ನಡೆಯುತ್ತದೆ. ವಿಸರ್ಜನೆ ಎಂದು ಖೇದವಿಲ್ಲ. ''ಗಚ್ಛ ಗಚ್ಛ ಸುರಶ್ರೇಷ್ಠ ಪುನರಾಗಮನಾಯಚ'' ಎಂದು ಮರು ಆಹ್ವಾನವನ್ನು ಕೊಟ್ಟು, ವಿಸರ್ಜನೆಗೆ ತೆಗೆದುಕೊಂಡಯ್ಯಲಾಗುತ್ತದೆ. ಹೂಗಳಿಂದ ಅಲಂಕಾರ ಮಾಡಿದ ವಾಹನದಲ್ಲಿ ಗೌರಿ ಹಾಗೂ ಗಣಪತಿಯನ್ನು ಕೂಡಿಸಿ ಮೆರವಣಿಗೆಯಲ್ಲಿ ದಾದರ್ ಸಮುದ್ರಕ್ಕೆ ಕೊಂಡೊಯ್ಯಲಾಯಿತು. ಸಮುದ್ರ ದಂಡೆಯಲ್ಲಿ ಮತ್ತೆ ಮಂಗಳಾರತಿ ಮಾಡಿ ಸಮುದ್ರದಲ್ಲಿ ವಿಸರ್ಜಿಸಲಾಯಿತು. ಮೆರವಣಿಗೆಯಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನ ಜೈಕಾರಗಳನ್ನು ಘೋಷಿಸುತ್ತಾ ಬಹಳ ಆನಂದದಿಂದ ಭಾಗವಹಿಸಿದ್ದರು. ನಂತರ ಎಲ್ಲರಿಗೂ ಪ್ರಸಾದ ವಿನಿಯೋಗವಾಯಿತು. ಎಲ್ಲರೂ ಹರ್ಷಚಿತ್ತರಾಗಿ ಮನೆಗೆ ಹಿಂದಿರುಗಿದರು.

-- ರಮಾ ವಸಂತ್



ಪೂಜಾ ವಿಧಿಯಲ್ಲಿ ಪಾಲ್ಗೊಳ್ಳಲು ನೆರೆದಿರುವ ಭಕ್ತವೃಂದ

ಪ್ರಮುಖ ಚಾಲುಕ ಉಷಾಮೆಹ್ತಾ, ಬಹಿಷ್ಕಾರ ಹಾಕಿರ ತಕ್ಷಣ ಸಮಾಚಾರ ಓದುವ ಕೆಲಸ ವಹಿಸಿದ್ದರು. ಇದು ಕಾಂಗ್ರೆಸ್ ರೇಡಿಯೋ. ಎಲ್ಲೋ ಇಂಡಿಯಾದಿಂದ ಪ್ರಸಾರವಾಗುತ್ತಿದೆ. 42.34 ಮೀಟರ್‌ನಿಂದ ಈ ಬಾನುಲಿ ಮುಂಬೈ ಮತ್ತು ನಾಸಿಕ್‌ನಿಂದ ಸಮಾಚಾರವನ್ನು ಬಿತ್ತರಿಸಿದ್ದು ಆಗಾಗ ಸ್ಥಳಾಂತರಿಸುತ್ತಿತ್ತು. ಚೌಪಾಟಿಯಿಂದ, ವಾಲಕೇಶ್ವರದ ಮತ್ತಲ್ಲಿಂದ, ಲಕ್ಷ್ಮಿ ಭವನ, ಪ್ಯಾರಡೈಸ್ ಬಂಗ್ಲೆ ಎಲ್ಲ ಕಡೆಯಿಂದ, ಎಲ್ಲಿ ಸಾಧ್ಯವಾದವೊ ಅಲ್ಲಿಗೆ November 12ನೇ ತಾರೀಖಿನವರೆಗೆ ನಡೆಯಿತು. ಇದನ್ನು ಕೂಡಿಸಿಕೊಟ್ಟ ಇಂಜಿನಿಯರ್, ಪೋಲಿಸರಿಗೆ ಸಹಾಯ ಮಾಡಿದ್ದರಿಂದ ಇನ್ನೂರೈವತ್ತು ಮಂದಿ ಪೋಲೀಸರು ಸುತ್ತುವರಿದು, ಕಾನೂನು ಬಾಹಿರ ಮಾಡಿದ ಇವರನ್ನೂ ಕಂಡುಹಿಡಿದರು. ಪೋಲೀಸರು ಸುತ್ತುವರಿದ ಹೊತ್ತಿನಲ್ಲಿ ರೇಡಿಯೋ ನಿಲಯ "ವಂದೇ ಮಾತರಮ್ ಹಾಡುತ್ತಿತ್ತು" ಉಷಾ ಮೆಹ್ತಾ ತಮ್ಮ ದಿಟ್ಟವಾಣಿಯಲ್ಲಿ ಹೀಗೆಂದರಂತೆ "ಇದು ನಮ್ಮ ರಾಷ್ಟ್ರಗೀತೆ, ನಿಂತಿರಿ" ಪೋಲೀಸರು ರಾಷ್ಟ್ರಗೀತೆ ಮುಗಿದ ಮೇಲೆ ಅವರನ್ನು ಬಂಧಿಸಿದರು.

ಬಂಧಿಯಾಗಿ, ಒಂಟಿಯಾಗಿ ಒಬ್ಬಳೇ ಮಹಿಳೆ, ಚಿಕ್ಕ ಪ್ರಾಯದ ಉಷಾ ಮೆಹ್ತಾ ನಾಲ್ಕು ವರ್ಷಗಳ ಸುಧೀರ್ಘ ಕಾಲ ಎರವಾಡ ಜೈಲಿನಲ್ಲಿ ಇರಬೇಕಾದದ್ದು ಎಂತವರಗೂ ಧೈರ್ಯ ಕುಸಿಯುವಂತಾದ್ದು. ಆದರೆ ಎದೆ ಗುಂದದೆ ಪ್ರತಿ ದಿವಸ ಆರು ತಿಂಗಳಕಾಲ ಅವರು ವಿಚಾರಣೆಗೆ ಒಳಪಡಬೇಕಾಯ್ತು. ಆರು ತಿಂಗಳಾದ ಮೇಲೆ ಬೇರೆ ನ್ಯಾಯಾಲಯಕ್ಕೆ ಕರೆತರಲಾಯ್ತು ಮತ್ತು ಅವರ ಮೇಲೆ ಪ್ರಭಾವ ಶಕ್ತಿಯುಳ್ಳ ಕೈವಾಡವನ್ನು ನಡೆಸಲಾಯ್ತು. ಆದರೆ ಯಾರಿಗೂ ಬಗ್ಗದ ಉಷಾ ಮೆಹ್ತಾ, ಜಡ್ಜಿ ಸಾಹೇಬರು ಕೇಳಿದ ಪದೇ ಪದೇ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡಲಿಲ್ಲವಂತೆ. ತನ್ನನ್ನು ಬಚಾಯಿಸಿಕೊಳ್ಳಲು ಸುಳ್ಳು ಹೇಳಬಹುದಿತ್ತು. ಆದರೆ ಹಾಗೆ ಮಾಡದೆ ಇದ್ದದರಿಂದ ಉಷಾ ಮೆಹ್ತಾ ಜಡ್ಜಿಯವರ ಪ್ರಶಂಸೆಗೆ ಒಳಗಾದರು.

ನಾಲ್ಕು ವರುಷ ಎರವಾಡ ಜೈಲಿನಲ್ಲಿ ಇರಬೇಕಾದ್ದರಿಂದ ಪೋಲೀಸಿನವರ ಕಿರುಕುಳ, ಇದನ್ನೆಲ್ಲಾ ಸಹಿಸಬೇಕಾಗಿದ್ದ ಅವರಿಗೆ, ಅವರನ್ನು ಕಾಪಾಡಿದ್ದು ಅವರು ಇಟ್ಟಿದ್ದ ದೃಢ ನಂಬಿಕೆ ಮತ್ತು ಭಕ್ತಿ. ಆದರೆ ನಾಲ್ಕು ವರುಷ ಕಾರಾಗೃಹವನ್ನು ಅನುಭವಿಸಿದ ಅವರ ಆರೋಗ್ಯ ಸಾಕಷ್ಟು ಕೆಟ್ಟು ಅವರ ಜೀರ್ಣಶಕ್ತಿಗೆ ಭಾರಿ ಅಘಾತವಾಯಿತು. ಅದರ ಪರಿಣಾಮವನ್ನು ಈಗಲೂ ಅನುಭವಿಸುತ್ತಿದ್ದರು. ಅವರು ಕಠೋರ ಶಕ್ತಿಯಿಂದ ಎಲ್ಲವನ್ನೂ ಸಹಿಸಿದರು.

1946 ಮುಂಬೈನಲ್ಲಿ ಅವರ ಬಿಡುಗಡೆಯಾಯಿತು. ಬಿಡುಗಡೆಯಾದ ತಕ್ಷಣ ಉಷಾ ಮೆಹ್ತಾ ಮುಂಬಯಿ ವಿಶ್ವವಿದ್ಯಾನಿಲಯದ Ph.d. ಪದವಿಗೆ ನೊಂದಾಯಿಸಿದರು. ಆರಿಸಿದ ವಿಷಯ "ಗಾಂಧೀಜಿಯವರ ಆಲೋಚನೆ" ಅವರಿಗೆ ಬೇಕಾಗಿದ್ದರೆ ರಾಜಕೀಯವನ್ನು ಆರಿಸಿ ಎಲ್ಲಿಯಾದರೂ ಮಂತ್ರಿಯಾಗಲಿ ಅಥವಾ ರಾಜಕಾರಣಿಯಾಗಲಿ ಆಗಬಹುದಿತ್ತು. ಆದರೆ ಉಷಾಮೆಹ್ತಾ ಆರಿಸಿದ್ದು ಅಧ್ಯಾಪಕ ವೃತ್ತಿ. ಆಗತಾನೆ ಶುರುವಾಗಿದ್ದ ಮುಂಬೈ ವಿಶ್ವವಿದ್ಯಾನಿಲಯದ Department of Civics and Politics (1948) ಅಧ್ಯಾಪಕಿಯಾಗಿ ಸೇರಿ, ರಾಜ್ಯಶಾಸ್ತ್ರದ ಮುಖ್ಯಸ್ಥರಾಗಿ 1980ರ ವರೆಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಮುಂಬೈ ವಿಶ್ವವಿದ್ಯಾನಿಲಯದ ಭಾಗ್ಯದ ಬಾಗಿಲು ತೆರೆದಿತ್ತು. ಆದರೆ ಒಬ್ಬ ಮುತ್ಸದ್ದಿ ರಾಜಕಾರಣಿ ದೇಶಕ್ಕೆ ದೊರಕಲಿಲ್ಲ. ಇಂಡಿಯಾದ ತುರ್ತು ಪರಿಸ್ಥಿತಿಯಲ್ಲಿ ಹಲವಾರು ರಾಜಕಾರಣಿಗಳು ಉಷಾ ಮೆಹ್ತಾರವರನ್ನು ರಾಜಕಾರಣಕ್ಕಾಗಿ ಎಳೆದದ್ದು ಉಂಟು. ಅವರಿಗೆ ಬೇಕಾಗಿದ್ದರೆ ಎಲ್ಲಿಯಾದರೋ ಉಪಕುಲಪತಿಯೋ, ಮಂತ್ರಿಯೋ ಆಗಬಹುದಿತ್ತು. ಆದರೆ ಅಧ್ಯಾಪಕ ವೃತ್ತಿಯನ್ನು ಪ್ರೀತಿಸಿದ ಡಾ. ಉಷಾ ಮೆಹ್ತಾಗೆ ಇದ್ಯಾವ ಪದವಿಯೂ ಹೆಚ್ಚಿನದೆಂದು ತೋರಲಿಲ್ಲ.

ಉಷಾ ಮೆಹ್ತಾರವರು ಹಲವು ಮುತ್ಸದ್ದಿಗಳ ಹಾಗೆ ವಿಶ್ವವಿದ್ಯಾನಿಲಯದ ಗೋಪುರದಲ್ಲಿ ಕುಳಿತವರಲ್ಲ. ಅವರು ಸಾಕಷ್ಟು ಸ್ಥಳೀಯ, ಹೊರದೇಶದ ಪ್ರಕಟಣೆಗೆ ತಮ್ಮ ಬರವಣಿಗೆಯನ್ನೂ, ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಅವರು ಮಾನವೀಯತೆಯ ಮತ್ತು ದೈನಂದಿನ ಆಗುಹೋಗುಗಳಲ್ಲಿ ಹೆಚ್ಚು ಮುತುವರ್ಜಿಯನ್ನು ಹೊಂದಿದ್ದರು. ಇದಕ್ಕೆ ಒಂದು ಉದಾಹರಣೆ 'Employees State Insurance (Medical) in the State of Maharashtra a Case Study' ಇದು, political Scientistಗಳಿಗೆ ಅಷ್ಟೇನೂ ಪ್ರಿಯವಲ್ಲದ ಕೆಲಸ.

ಅವರು ಎಂತಹ ಗೋಷ್ಠಿಗಳಲ್ಲಿ ಭಾಗವಹಿಸಿದರೂ ಅದು ಹೆಚ್ಚು ಕಳೆಕಟ್ಟುತ್ತಿತ್ತು. ಇದಲ್ಲದೆ, ಎಲ್ಲರೂ ಹೇಳುವದನ್ನು ಕೇಳಿಸಿಕೊಂಡು, ತಮ್ಮ ಖಚಿತವಾದ ನಿಲುವನ್ನು ತಿಳಿಸುವದು ಅವರ ರೀತಿ. ಕಾಲೇಜು ಟೀಚರ್ಸ್ ಯೂನಿಯನ್ ಅಂತವರಗೂ ಅವರ ಸಲಹೆ ಸಿಗುತ್ತಿತ್ತು. ಹಲವಾರು ಚಿಕ್ಕಪುಟ್ಟ ವಿಷಯಗಳನ್ನು ಕೂಲಂಕುಶವಾಗಿ ವಿಮರ್ಶಿಸಿ ತಮ್ಮ ಸಲಹೆ ಸೂಚನೆ ಕೊಡುವುದು ಅವರ ವಿಶೇಷ ಗುಣವಾಗಿತ್ತು.

ಹಲವಾರು ದೇಶ, ವಿದೇಶದ ಗೋಷ್ಠಿಗಳಲ್ಲಿ ಭಾಗವಹಿಸಿದ ಉಷಾಮೆಹ್ತಾರವರು ಅವರಿಂದ PhD. ಪಡೆದ ವಿದ್ಯಾರ್ಥಿಗಳು ಹಲವು ಮಂದಿ. ಇವಲ್ಲದೆ ಯೂನಿವರ್ಸಿಟಿ ಧನ ಸಹಾಯ ಮಂಡಲಿ, UPSC ಇತ್ಯಾದಿ, ಎಲ್ಲದರಲ್ಲೂ ಅವರ ಸೇವೆ ಇದೆ,

ಇದೆಲ್ಲಾ ಅವರಿಗೆ ಅತ್ಯಂತ ಶ್ರಮದಾಯಕವಾಗಿತ್ತು.ಆದರೆ ಅಂತ ಸಜ್ಜನರು ಸಿಗಬೇಕಲ್ಲ ! ಎರಡು ದಶಕಗಳ ಕಾಲ ಅವರು ಮುಂಬೈನ Internationasl University Student's Hostel, Warden ಆಗಿ ಸೇವೆ ಸಲ್ಲಿಸಿದರು. ಇದರಿಂದ ಹೊರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಒಬ್ಬ ಉತ್ತಮ ಹಿರಿಯ ಪೋಷಕ ದೊರಕಿದ್ದರು. ಒಂದು ದಶಕದ ಕಾಲ ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಹೊರದೇಶದಿಂದ ಬಂದ ವಿದ್ಯಾರ್ಥಿಗಳ ದಾಖಲಾತಿ ಸಲಹೆಗಾರರಾಗಿದ್ದರು. ಹಲವಾರು ಸಂದರ್ಭಗಳಲ್ಲಿ ಪರಿಸ್ಥಿತಿ ಉಲ್ಬಣಕ್ಕೆ ಹೋದಾಗ, ಉಷಾ ಮೆಹ್ತಾ ತಮ್ಮ ಉತ್ತಮ ಸಲಹೆಯಿಂದ ತಹಬಂದಿಗೆ ತಂದರು.

ಅವರು ಯಾವುದೇ ಅಧಿಕಾರಕ್ಕೆ ಯಾವತ್ತು ಆಸೆಪಟ್ಟವರಿಲ್ಲ. ಆದರೆ ಅವರ ಮೇಲೆ ಜವಾಬ್ದಾರಿಯುತವಾದ ಹಲವಾರು ಹೊಣೆಗಾರಿಕೆಯಿತ್ತು. ಎಲ್ಲಾ ಜವಾಬ್ದಾರಿಯನ್ನೂ ಸುವ್ಯವಸ್ಥ ರೀತಿಯಿಂದ ನಡೆಸುತ್ತಿದ್ದರು. ಉಷಾ ಮೆಹ್ತಾರವರು ತಮ್ಮ ಸ್ವಾರ್ಥಕ್ಕಾಗಿ ಎಂದೂ ಏನನ್ನೂ ಬಯಸಿದವರಲ್ಲ. ಮತ್ತು ತಮ್ಮ ಖಚಿತವಾದ ನಿಲುವನ್ನು ಬದಲಾಯಿಸಲು ತಯಾರಿರಲಿಲ್ಲ. ತಮ್ಮ ದಿಟ್ಟ ನಿಲುವಿನಿಂದ ಎತ್ತರವಾದ ಶಿಖರದ ಮೇಲಿರುವ ದೀಪದಂತಿದ್ದರು. ಯಾರು ಬೇಕಾದರೂ ಅವರನ್ನು ನೋಡಬಹುದಿತ್ತು. ಯಾರೂ ಅವರನ್ನು ನೋಡಿ ಬಿಗ್ಗೆಯಿಂದ ಹಿಂದಿರುಗಬೇಕಾದ್ದಿರಲಿಲ್ಲ. ಅವರು ತಮ್ಮ ಕೊಡುಗೈಯಿಂದ ಸಹಾಯ ಮಾಡಿದ್ದನ್ನು ಎಂದೂ ಪ್ರಕಟಪಡಿಸಲು ಹೋಗಲಿಲ್ಲ.

ಮಣಿಭವನ್ : ತಮ್ಮ ಪ್ರಾಧ್ಯಾಪಕ ಸ್ಥಾನದಿಂದ ನಿವೃತ್ತಿ ಹೊಂದಿದ ಮೇಲೆ (1980) ತಮ್ಮ ಸಮಯವನ್ನೆಲ್ಲಾ ಮಹಾತ್ಮರ ನೆನಪಿನ

# ಹೀಗಿದ್ದರು : ನಮ್ಮ ಪದ್ಮಭೂಷಣ ಡಾ। ಉಷಾ ಮೆಹ್ತಾ

**(1920-2000)**

✍ ಲೀಲಾ ಜೋಯಿಸ್

ಸ್ವಾತಂತ್ರ್ಯ ಪೂರ್ವದಿಂದೀಚೆಗೆ, ಅಂದರೆ ಸುಮಾರು ಐದು ದಶಕಗಳು ಕಳೆದಿದ್ದರೂ, ಮುಂಬೈನಲ್ಲಿರುವ ಪ್ರತಿ ಒಬ್ಬರಿಗೂ ಅಥವಾ ಮುಂಬೈ ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಯಾದವರಿಗೆ ಮಹಾತ್ಮ ಗಾಂಧೀಜಿಯವರನ್ನು ನೋಡಲಾಗದಿದ್ದರೂ, ಅವರ ಅನುಯಾಯಿಯಾದ ಪ್ರೊ. ಉಷಾ ಮೆಹ್ತಾರವರನ್ನು ನೋಡಿದಕ್ಷಣ ಗಾಂಧೀಜಿಯವರು ''ಹೀಗಿದ್ದರೇನೋ'' ಎಂಬ ಕಲ್ಪನೆ ಬರುವುದು ಮತ್ತು ನಮ್ಮೆಲ್ಲರನ್ನೂ ಪ್ರೀತಿ, ವಿಶ್ವಾಸದಿಂದ ಮತ್ತು ಮಾನವೀಯತೆಯಿಂದ ಕಾಣುತ್ತಿದ್ದ ಪ್ರೊ॥ ಉಷಾ ಮೆಹ್ತಾ ಇನ್ನಿಲ್ಲ ಎಂದು ನಂಬಲಾರದ ಸಂಗತಿಯಾಗಿದೆ.

ಹಲವರಿಗೆ ಹಲವಾರು ರೀತಿಯ ಸ್ವಾಂತನ ನೀಡಿ, ತಮ್ಮ ಸುತ್ತ ಸುತ್ತುವರಿಯುತ್ತಿದ್ದ, ಚಿಕ್ಕ ಪುಟ್ಟ ವಿದ್ಯಾರ್ಥಿಗಳು, ವಯಸ್ಸಾದವರು, ಪರಿಚಯಸ್ತರು, ಅಪರಿಚಿತರು ಎಲ್ಲರನ್ನೂ ಏಕಕಾಲದಲ್ಲಿ ಲಕ್ಷ್ಯಕೊಟ್ಟು ಮಾತಾಡಿಸಿ, ತಮ್ಮ ಬಿಡುವಿಲ್ಲದ ವೇಳೆಯಲ್ಲೂ, ಬಿಡುವು ಮಾಡಿಕೊಂಡು ಸ್ವಾಂತನ ನೀಡುತ್ತಿದ್ದ ಈ ಹಿರಿಯ ಚೇತನ, ಇದೇ ಶುಕ್ರವಾರ ರಾತ್ರಿ (11-8-2000) ಇಚ್ಛಾ ಮರಣಿಯಂತೆ ತೀರಿಕೊಂಡರು. ತಮ್ಮ ಕೊನೆಯವರೆಗೆ ಅಂದರೆ 9-11-2000 ಆಗಸ್ಟ್, ಕ್ರಾಂತಿ ಮೈದಾನದಲ್ಲಿ ಧ್ವಜ ಏರಿಸಿ, 8ನೇ ತಾರೀಖು ಒಂದು ಪುಸ್ತಕ ಬಿಡುಗಡೆಗಾಗಿ ದೆಹಲಿಗೆ ಹೋಗಿದ್ದರು.

ಸ್ವಾತಂತ್ರ್ಯ ಸಮರದಲ್ಲಿ ಉಷಾ ಮೆಹ್ತರವರು ಧುಮುಕಿದಾಗ ಅವರದ್ದು ತುಂಬಾ ಚಿಕ್ಕ ಪ್ರಾಯ. ಅವರಿಗೆ ಮಹಾತ್ಮರ ದರ್ಶನವಾದದ್ದು ಸಬರ್ಮತಿ ಆಶ್ರಮದಲ್ಲಿ. ತಕ್ಷಣ ಮಹಾತ್ಮರ ಪ್ರಭಾವ ಅವರ ಮೇಲೆ ಪ್ರಭಾವ ಬೀರಿತು. (1928) ಸೈಮನ್ ಕಮೀಷನ ವಿರುದ್ಧದ ಅಂದೋಲನದಲ್ಲಿ ಉಷಾ ಮೆಹ್ತಾ ಭಾಗವಹಿಸಿದ್ದರು. ಅದರ ವಿರುದ್ಧ ಹೋರಾಡಿದಾಗ ಅವರಿಗೆ ತೀರಾ ಚಿಕ್ಕ ವಯಸ್ಸು. 'ಸೈಮನ ಹಿಂತಿರುಗು' ಕೂಗುವದು ಅವರ ಕೆಲಸವಾಗಿತ್ತು. ಪ್ರಭಾತ ಭೇರಿಗಳಲ್ಲಿ ಭಾಗವಹಿಸುತ್ತಿದ್ದರು. ಎಲ್ಲರ ಪರಿಚಯ ಮಾಡಿಕೊಂಡು ಮೇಲೆ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದರು. ಮಹಾತ್ಮರ ಕ್ಯಾಂಪ ಸೇರಲು ಖಾದಿವಸ್ತ್ರ ಧರಿಸಬೇಕಾಗಿತ್ತು. ಗಾಂಧೀಜಿಯವರಿಗೆ ಮಕ್ಕಳು ವಿದೇಶೀ ವಸ್ತ್ರವನ್ನು ಧರಿಸುವದು ಹಿಡಿಸುತ್ತಿರಲಿಲ್ಲ. ಗಾಂಧೀಜಿ ಖಾದಿಯನ್ನು ಕಡ್ಡಾಯ ಮಾಡಿದ್ದರಿಂದ ಉಷಾ ಮೆಹ್ತಾ ತೊಡಲು ಹಿಂದೆಗೆಯಲಿಲ್ಲ. ಒಬ್ಬಳೇ ಮಗಳಾದ ಉಷಾ ಮೆಹ್ತಾ ಖಾದಿ ತೊಡುವುದು ತಾಯಿಗೆ ಸ್ವಲ್ಪಕೂಡ ಇಷ್ಟವಿಲ್ಲ. ಆದರೆ ಈ ಮಗಳು ಕೇಳಬೇಕಲ್ಲ! ''ನಿಮ್ಮ ಸೊಸೆಯರಿಗೆ ಆಭರಣ ವಸ್ತ್ರ ಇವುಗಳನ್ನು ಕೊಡಿಸಿ ಸಂತಸಪಡಿ'' ಎಂಬ ದಿಟ್ಟ ಉತ್ತರ. ಇದೊಂದೇ ಅಲ್ಲದೆ. ಮತ್ತೊಂದು ಬಂತು ಬತ್ತಳಿಕೆ ಅಸ್ತ್ರ ''ನಾನು ಎಂದಾದರೊಂದು ದಿನ ಮದುವೆಯಾದರೆ ವರದಕ್ಷಿಣೆ ಕೇಳದೆ ಇರತಕ್ಕ ಮತ್ತು ಸ್ವಾತಂತ್ರ್ಯಸಮರದಲ್ಲಿ ನನಗೆ ಸಹಾಯ ಮಾಡುವಂತವನನ್ನು ಮದುವೆಯಾಗುವೆನು'' ಮೊದಲು ಅವರ ತಂದೆಗೂ ಮಗಳ ಚಿಂತೆಯಿತ್ತು. ತಂದೆ (1932) ನಿವೃತ್ತರಾದ ಮೇಲೆ ಮುಂಬೈ ಮಹಾನಗರಿಗೆ ಪ್ರವೇಶ ಮಾಡಿದರು. ಮಕ್ಕಳಾದ ಉಷಾ ಮೆಹ್ತಾ ಮತ್ತು ಸಂಗಡಿಗರು, ಚೀಟಿಹಂಚುವದು, ಚೌಪಾಟಿ ಸಮುದ್ರದ ನೀರಿನಿಂದ ಉಪ್ಪಿನ ಚೀಲಗಳನ್ನು ಮಾಡುವದು, ಮತ್ತು ಮುಂಬೈ ಜೈಲಿನಲ್ಲಿದ್ದ ಸಂಬಂಧಿಕರ ಭೇಟಿ ಮಾಡಿ ಸಮಾಚಾರ ತಲಪಿಸುವದು ಇದೆಲ್ಲವನ್ನೂ ಹಮ್ಮಿಕೊಂಡಿದ್ದರು.

ವಿದ್ಯಾಭ್ಯಾಸ : ಡಾ. ಉಷಾಮೆಹ್ತಾ ಓದಿದ್ದು ಮುಂಬೈನ ಹೆಸರಾಂತ ವಿಲ್‌ಸನ್ ಕಾಲೇಜಿನಲ್ಲಿ. ಆ ಕಾಲದ ಹೆಸರಾಂತ ಕಾಲೇಜಾಗಿದ್ದಲ್ಲದೆ, ಅನೇಕ ಸ್ವಾತಂತ್ರ್ಯ ಧೀರರನ್ನು ಕೊಟ್ಟ ಕಾಲೇಜು. ಕಾಲೇಜಿನ ಆಡಳಿತ ವರ್ಗ ಸ್ಕಾಟ್‌ಲೇಂಡ್‌ನವರಾದರೂ ಸ್ವಾತಂತ್ರ್ಯ ಸಮರಕ್ಕೆ ಹೋರಾಡುತ್ತಿರುವವರನ್ನು ಯಾವ ರೀತಿಯಿಂದಲೂ ತಡೆಯುತ್ತಿರಲಿಲ್ಲ. ಡಾ. ಉಷಾ ಮೆಹ್ತಾ ಉತ್ತಮ ವಿದ್ಯಾರ್ಥಿನಿಯಾಗಿ ಮತ್ತೆ ಎಲ್.ಎಲ್.ಬಿ., ಪರೀಕ್ಷೆಯನ್ನು ಮುಗಿಸಿದರು. ಉತ್ತಮ ವಾಗ್ಮಿ, ವಿದ್ಯಾರ್ಥಿಯಾದ ಉಷಾ ಮೆಹ್ತಾ ಇನ್ನೂ ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆಂದು ಮನೆಯವರೆಲ್ಲರ ಹಂಬಲ. ಆದರೆ ದೇಶದ ಸ್ವಾತಂತ್ರ್ಯ ಸೆಳೆತ ಒಂದು ಕಡೆ. "ಪರೀಕ್ಷೆಗಳು ಬರುತ್ತದೆ ಹೋಗುತ್ತದೆ, ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ಅವಕಾಶ ಒಂದೇ ಸಲ ಸಿಕ್ಕುವದು" ಇದು ಉಷಾ ಮೆಹ್ತಾರವರ ವಾದ. ಉಷಾ ಮೆಹ್ತಾರವರ ಅಣ್ಣಂದಿರು ಅವರ ತಂದೆ ತಾಯಿಯವರ ಯೋಗಕ್ಷೇಮದ ಸಂಪೂರ್ಣ ಭರವಸೆ ಇತ್ತು ಇವರನ್ನು ಹುರುದುಂಬಿಸಿದ್ದರಿಂದ ಉಷಾ ಮೆಹ್ತಾ ಸ್ವಾತಂತ್ರ್ಯ ಸಮರದಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು.

ಚಿಕ್ಕ ವಯಸ್ಸಿನ ಉಷಾಮೆಹ್ತಾರವರ ಸಾಹಸವನ್ನು ಮೆಚ್ಚಬೇಕಾದದ್ದು. ''ನಾನು ಏನು ಮಾಡಬೇಕೊ ಅದನ್ನೇ ಮಾಡಿದ್ದೇನೆ. ತಾಯ್ನಾಡಿಗೆ ಸಲ್ಲಿಸಬೇಕಾದ ಕರ್ತವ್ಯ ಹೀಗೆಂದು ಹಲವಾರು ವರ್ಷಗಳ ನಂತರ ಉಷಾಮೆಹ್ತಾ ಅಂದದ್ದುಂಟು.

**ಕಾಂಗ್ರೆಸ್ ರೇಡಿಯೋ :**

ಆಗಸ್ಟ್ 1942. ಗಾಂಧಿಜೀಯವರು 'ಮಾಡು ಅಥವಾ ಮಡಿ' ಎಲ್ಲೆಡೆಯಲ್ಲೂ ಘೋಷಿತ. ಇದು ಬ್ರಿಟೀಷರಿಗೆ ನುಂಗಲಾರದ ತುತ್ತಾಗಿತ್ತು. ಬ್ರಿಟೀಷರು ಎಲ್ಲೆಡೆ ಜನರನ್ನು ಬಂಧಿಯಾಗಿರಿಸಲು ಮತ್ತು ಪತ್ರಿಕೆಗಳನ್ನು ಶೋಧಿಸಲು ಆರಂಭಿಸಿದ್ದರು. ಈ ಸಮಯದಲ್ಲೇ ನಮ್ಮ ಉಷಾ ಮೆಹ್ತಾ ''ಬ್ರಿಟೀಷರೇ ಭಾರತದಿಂದ ತೊಲಗಿ'' ಎಂಬ ಧ್ವನಿಯನ್ನು ''ಕಾಂಗ್ರೆಸ್ ಧ್ವನಿ ಸುರುಳಿಯಿಂದ ಮುಂಬೈನಲ್ಲಿ Aug. 27ರಿಂದ Nov. 12. 1942ರ ವರಿಗೆ ನಡೆಸಿದ್ದುಂಟು. ನ್ಯಾಶನಲ್ ಪತ್ರಾಗಾರ ದೆಲ್ಲಿಯಲ್ಲಿ ''Illegal Congress Radio 1942 ಎಂಬ ದಾಖಲೆಯಲ್ಲಿ ಇದರ ಮಾಹಿತಿ ಸಿಗುತ್ತದೆ ಎಂಬುದಾಗಿ ಗೌತಮ ಚಟರ್ಜಿಯವರು (16-8-2000) ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದಿದ್ದಾರೆ. ಮುಖಂಡತ್ವವನ್ನು ವಹಿಸಿದವರೆಂದರೆ, ರಾಮ್‌ಮನೋಹರ ಲೋಹಿಯಾ ಮತ್ತು ಕಾಂಗ್ರೆಸ್ ಸೋಷಿಯಲಿಷ್ಟರು. ಇವರೆಲ್ಲಾ ಬ್ರಿಟೀಷರ್ ಭಾರತ ಬಿಟ್ಟು ತೊಲಗಿ ಎಂಬುದಕ್ಕೆ ಸೇರಿದ, ಸೂಕ್ಷ್ಮ ಸಂದೇಶವನ್ನು ಜನರಿಗೆ ನೀಡುವದರಲ್ಲಿ ಯಶಸ್ವಿಯಾದರು. ಈ ಭೂಮಿಯ ಕೆಳಗಿನ ಕಾನೂನು ಬಾಹಿರ ರೇಡಿಯೋ ನಿಲಯ ಸ್ವಾತಂತ್ರ್ಯ ಸಮರದ ವರ್ತಮಾನ, ಹೊಸಸುದ್ದಿ, ಇವುಗಳನ್ನು ತಿಳಿಸುವ ಮಾಧ್ಯಮವಾಗಿತ್ತು. ಇವಕ್ಕೆ ಇಂಬುಕೊಟ್ಟವರೆಂದರೆ, ಅಚ್ಯುತ ಪಟವರ್ಧನ, ಲೋಹಿಯ ಮತ್ತು ಸುಚೇತಾ ಕೃಪಲಾನಿ. ಸುಚೇತಾ ಕೃಪಲಾನಿಯರ ಮೇಲಿದ್ದ ಕೆಲಸ, ನಿಷೇಧ ಕಾಂಗ್ರೆಸಿನ ಅಧಿಕೃತ ಪ್ರಕಟಣೆ ಹೊರಡಿಸುವದು ಆಗಿತ್ತು. ಕಾಂಗ್ರೆಸ್ ರೇಡಿಯೋದ

ಪ್ರಮುಖ ಚಾಲಕ ಉಷಾಮೆಹ್ತಾ, ಬಹಿಷ್ಕಾರ ಹಾಕಿರ ತಕ್ಕಂತ ಸಮಾಚಾರ ಓದುವ ಕೆಲಸ ವಹಿಸಿದ್ದರು. ಇದು ಕಾಂಗ್ರೆಸ್ ರೇಡಿಯೋ. ಎಲ್ಲೋ ಇಂಡಿಯಾದಿಂದ ಪ್ರಸಾರವಾಗುತ್ತಿದೆ. 42.34 ಮೀಟರ್‌ನಿಂದ ಈ ಬಾನುಲಿ ಮುಂಬೈ ಮತ್ತು ನಾಸಿಕ್‌ನಿಂದ ಸಮಾಚಾರವನ್ನು ಬಿತ್ತರಿಸಿದ್ದು ಆಗಾಗ ಸ್ಥಳಾಂತರಿಸುತ್ತಿತ್ತು. ಚೌಪಾಟಿಯಿಂದ, ವಾಲಕೇಶ್ವರದ ಮತ್ತಲ್ಲಿಂದ, ಲಕ್ಷ್ಮಿಭವನ, ಪ್ಯಾರಡೈಸ್ ಬಂಗ್ಲೆ ಎಲ್ಲಕಡೆಯಿಂದ, ಎಲ್ಲಿ ಸಾಧ್ಯವಾದವೊ ಅಲ್ಲಿಗೆ November 12ನೇ ತಾರೀಖಿನವರೆಗೆ ನಡೆಯಿತು. ಇದನ್ನು ಕೊಡಿಸಿಕೊಟ್ಟ ಇಂಜಿನಿಯರ್, ಪೋಲಿಸರಿಗೆ ಸಹಾಯ ಮಾಡಿದ್ದರಿಂದ ಇನ್ನೂರೈವತ್ತು ಮಂದಿ ಪೋಲೀಸರು ಸುತ್ತುವರಿದು, ಕಾನೂನು ಬಾಹಿರ ಮಾಡಿದ ಇವರನ್ನೂ ಕಂಡುಹಿಡಿದರು. ಪೋಲಿಸರು ಸುತ್ತುವರಿದ ಹೊತ್ತಿನಲ್ಲಿ ರೇಡಿಯೋ ನಿಲಯ ''ವಂದೇ ಮಾತರಮ್ ಹಾಡುತ್ತಿತ್ತು'' ಉಷಾ ಮೆಹ್ತಾ ತಮ್ಮ ದಿಟ್ಟವಾಣಿಯಲ್ಲಿ ಹೀಗೆಂದರಂತೆ ''ಇದು ನಮ್ಮ ರಾಷ್ಟ್ರಗೀತೆ, ನಿಂತಿರಿ'' ಪೋಲೀಸರು ರಾಷ್ಟ್ರಗೀತೆ ಮುಗಿದ ಮೇಲೆ ಅವರನ್ನು ಬಂಧಿಸಿದರು.

ಬಂಧಿಯಾಗಿ, ಒಂಟಿಯಾಗಿ ಒಬ್ಬಳೇ ಮಹಿಳೆ, ಚಿಕ್ಕ ಪ್ರಾಯದ ಉಷಾ ಮೆಹ್ತಾ ನಾಲ್ಕು ವರ್ಷಗಳ ಸುಧೀರ್ಘ ಕಾಲ ಎರವಾಡ ಜೈಲಿನಲ್ಲಿ ಇರಬೇಕಾದದ್ದು ಎಂತವರಗೂ ಧೈರ್ಯ ಕುಸಿಯುವಂತಾದ್ದು. ಆದರೆ ಎದೆ ಗುಂದದೆ ಪ್ರತಿ ದಿವಸ ಆರು ತಿಂಗಳಕಾಲ ಅವರು ವಿಚಾರಣೆಗೆ ಒಳಪಡಬೇಕಾಯ್ತು. ಆರು ತಿಂಗಳಾದ ಮೇಲೆ ಬೇರೆ ನ್ಯಾಯಾಲಯಕ್ಕೆ ಕರೆತರಲಾಯ್ತು ಮತ್ತು ಅವರ ಮೇಲೆ ಪ್ರಭಾವ ಶಕ್ತಿಯುಳ್ಳ ಕೈವಾಡವನ್ನು ನಡೆಸಲಾಯ್ತು, ಆದರೆ ಯಾರಿಗೂ ಬಗ್ಗದ ಉಷಾ ಮೆಹ್ತಾ, ಜಡ್ಜಿ ಸಾಹೇಬರು ಕೇಳಿದ ಪದೇ ಪದೇ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡಲಿಲ್ಲವಂತೆ. ತನ್ನನ್ನು ಬಚಾಯಿಸಿಕೊಳ್ಳಲು ಸುಳ್ಳು ಹೇಳಬಹುದಿತ್ತು. ಆದರೆ ಹಾಗೆ ಮಾಡದೆ ಇದ್ದದರಿಂದ ಉಷಾ ಮೆಹ್ತಾ ಜಡ್ಜಿಯವರ ಪ್ರಶಂಸೆಗೆ ಒಳಗಾದರು.

ನಾಲ್ಕು ವರುಷ ಎರವಾಡ ಜೈಲಿನಲ್ಲಿ ಇರಬೇಕಾದ್ದರಿಂದ ಪೋಲೀಸಿನವರ ಕಿರುಕುಳ, ಇದನ್ನೆಲ್ಲಾ ಸಹಿಸಬೇಕಾಗಿದ್ದ ಅವರಿಗೆ, ಅವರನ್ನು ಕಾಪಾಡಿದ್ದು ಅವರು ಇಟ್ಟಿದ್ದ ದೃಢ ನಂಬಿಕೆ ಮತ್ತು ಭಕ್ತಿ. ಆದರೆ ನಾಲ್ಕು ವರುಷ ಕಾರಾಗ್ರಹವನ್ನು ಅನುಭವಿಸಿದ ಅವರ ಆರೋಗ್ಯ ಸಾಕಷ್ಟು ಕೆಟ್ಟು ಅವರ ಜೀರ್ಣಶಕ್ತಿಗೆ ಭಾರಿ ಆಘಾತವಾಯಿತು. ಅದರ ಪರಿಣಾಮವನ್ನು ಈಗಲೂ ಅನುಭವಿಸುತ್ತಿದ್ದರು. ಅವರು ಕಠೋರ ಶಕ್ತಿಯಿಂದ ಎಲ್ಲವನ್ನೂ ಸಹಿಸಿದರು.

1946 ಮುಂಬೈನಲ್ಲಿ ಅವರ ಬಿಡುಗಡೆಯಾಯಿತು. ಬಿಡುಗಡೆಯಾದ ತಕ್ಷಣ ಉಷಾ ಮೆಹ್ತಾ ಮುಂಬಯಿ ವಿಶ್ವವಿದ್ಯಾನಿಲಯದ Ph.d. ಪದವಿಗೆ ನೊಂದಾಯಿಸಿದರು. ಆರಿಸಿದ ವಿಷಯ ''ಗಾಂಧೀಜಿಯವರ ಆಲೋಚನೆ'' ಅವರಿಗೆ ಬೇಕಾಗಿದ್ದರೆ ರಾಜಕೀಯವನ್ನು ಆರಿಸಿ ಎಲ್ಲಿಯಾದರೂ ಮಂತ್ರಿಯಾಗಲಿ ಅಥವಾ ರಾಜಕಾರಣಿಯಾಗಲಿ ಆಗಬಹುದಿತ್ತು. ಆದರೆ ಉಷಾಮೆಹ್ತಾ ಆರಿಸಿದ್ದು ಅಧ್ಯಾಪಕ ವೃತ್ತಿ. ಆಗತಾನೆ ಶುರುವಾಗಿದ್ದ ಮುಂಬೈ ವಿಶ್ವವಿದ್ಯಾನಿಲಯದ Department of Civics and Politics (1948) ಅಧ್ಯಾಪಕಿಯಾಗಿ ಸೇರಿ, ರಾಜ್ಯಶಾಸ್ತ್ರದ ಮುಖ್ಯಸ್ಥರಾಗಿ 1980ರ ವರೆಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಮುಂಬೈ ವಿಶ್ವವಿದ್ಯಾನಿಲಯದ ಭಾಗ್ಯದ ಬಾಗಿಲು ತೆರೆದಿತ್ತು. ಆದರೆ ಒಬ್ಬ ಮುತ್ಸದ್ದಿ ರಾಜಕಾರಣಿ ದೇಶಕ್ಕೆ ದೊರಕಲಿಲ್ಲ. ಇಂಡಿಯಾದ ತುರ್ತು ಪರಿಸ್ಥಿತಿಯಲ್ಲಿ ಹಲವಾರು ರಾಜಕಾರಣಿಗಳು ಉಷಾ ಮೆಹ್ತಾರವರನ್ನು ರಾಜಕಾರಣಕ್ಕಾಗಿ ಎಳೆದದ್ದು ಉಂಟು. ಅವರಿಗೆ ಬೇಕಾಗಿದ್ದರೆ ಎಲ್ಲಿಯಾದರೋ ಉಪಕುಲಪತಿಯೋ, ಮಂತ್ರಿಯೋ ಆಗಬಹುದಿತ್ತು. ಆದರೆ ಅಧ್ಯಾಪಕ ವೃತ್ತಿಯನ್ನು ಪ್ರೀತಿಸಿದ ಡಾ. ಉಷಾ ಮೆಹ್ತಾಗೆ ಇದ್ಯಾವ ಪದವಿಯೂ ಹೆಚ್ಚಿನದೆಂದು ತೋರಲಿಲ್ಲ.

ಉಷಾ ಮೆಹ್ತಾರವರು ಹಲವು ಮುತ್ಸದ್ದಿಗಳ ಹಾಗೆ ವಿಶ್ವವಿದ್ಯಾನಿಲಯದ ಗೋಪುರದಲ್ಲಿ ಕುಳಿತವರಲ್ಲ. ಅವರು ಸಾಕಷ್ಟು ಸ್ಥಳೀಯ, ಹೊರದೇಶದ ಪ್ರಕಟಣೆಗೆ ತಮ್ಮ ಬರವಣಿಗೆಯನ್ನೂ, ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಅವರು ಮಾನವೀಯತೆಯ ಮತ್ತು ದೈನಂದಿನ ಆಗುಹೋಗುಗಳಲ್ಲಿ ಹೆಚ್ಚು ಮುತುವರ್ಜಿಯನ್ನು ಹೊಂದಿದ್ದರು. ಇದಕ್ಕೆ ಒಂದು ಉದಾಹರಣೆ 'Employees State Insurance (Medical) in the State of Maharashtra a Case Study' ಇದು, political Scientistಗಳಿಗೆ ಅಷ್ಟೇನೂ ಪ್ರಿಯವಲ್ಲದ ಕೆಲಸ.

ಅವರು ಎಂತಹ ಗೋಷ್ಠಿಗಳಲ್ಲಿ ಭಾಗವಹಿಸಿದರೂ ಅದು ಹೆಚ್ಚು ಕಳೆಕಟ್ಟುತ್ತಿತ್ತು. ಇದಲ್ಲದೆ, ಎಲ್ಲರೂ ಹೇಳುವದನ್ನು ಕೇಳಿಸಿಕೊಂಡು, ತಮ್ಮ ಖಚಿತವಾದ ನಿಲುವನ್ನು ತಿಳಿಸುವದು ಅವರ ರೀತಿ. ಕಾಲೇಜು ಟೀಚರ್ಸ್ ಯೂನಿಯನ್ ಅಂತವರಗೂ ಅವರ ಸಲಹೆ ಸಿಗುತ್ತಿತ್ತು. ಹಲವಾರು ಚಿಕ್ಕಪುಟ್ಟ ವಿಷಯಗಳನ್ನು ಕೂಲಂಕುಶವಾಗಿ ವಿಮರ್ಶಿಸಿ ತಮ್ಮ ಸಲಹೆ ಸೂಚನೆ ಕೊಡುವುದು ಅವರ ವಿಶೇಷ ಗುಣವಾಗಿತ್ತು.

ಹಲವಾರು ದೇಶ, ವಿದೇಶದ ಗೋಷ್ಠಿಗಳಲ್ಲಿ ಭಾಗವಹಿಸಿದ ಉಷಾಮೆಹ್ತಾರವರು ಅವರಿಂದ PhD. ಪಡೆದ ವಿದ್ಯಾರ್ಥಿಗಳು ಹಲವು ಮಂದಿ. ಇವಲ್ಲದೆ ಯೂನಿವರ್ಸಿಟಿ ಧನ ಸಹಾಯ ಮಂಡಲಿ, UPSC ಇತ್ಯಾದಿ, ಎಲ್ಲದರಲ್ಲೂ ಅವರ ಸೇವೆ ಇದೆ,

ಇದೆಲ್ಲಾ ಅವರಿಗೆ ಅತ್ಯಂತ ಶ್ರಮದಾಯಕವಾಗಿತ್ತು.ಆದರೆ ಅಂತ ಸಜ್ಜನರು ಸಿಗಬೇಕಲ್ಲ ! ಎರಡು ದಶಕಗಳ ಕಾಲ ಅವರು ಮುಂಬೈನ Internationasl University Student's Hostel, Warden ಆಗಿ ಸೇವೆ ಸಲ್ಲಿಸಿದರು. ಇದರಿಂದ ಹೊರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಒಬ್ಬ ಉತ್ತಮ ಹಿರಿಯ ಪೋಷಕ ದೊರಕಿದ್ದರು. ಒಂದು ದಶಕದ ಕಾಲ ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಹೊರದೇಶದಿಂದ ಬಂದ ವಿದ್ಯಾರ್ಥಿಗಳ ದಾಖಲಾತಿ ಸಲಹೆಗಾರರಾಗಿದ್ದರು. ಹಲವಾರು ಸಂದರ್ಭಗಳಲ್ಲಿ ಪರಿಸ್ಥಿತಿ ಉಲ್ಬಣಕ್ಕೆ ಹೋದಾಗ, ಉಷಾ ಮೆಹ್ತಾ ತಮ್ಮ ಉತ್ತಮ ಸಲಹೆಯಿಂದ ಹತಬಂದಿಗೆ ತಂದರು.

ಅವರು ಯಾವುದೇ ಅಧಿಕಾರಕ್ಕೆ ಯಾವತ್ತು ಆಸೆಪಟ್ಟವರಿಲ್ಲ. ಆದರೆ ಅವರ ಮೇಲೆ ಜವಾಬ್ದಾರಿಯುತವಾದ ಹಲವಾರು ಹೊಣೆಗಾರಿಕೆಯಿತ್ತು. ಎಲ್ಲಾ ಜವಾಬ್ದಾರಿಯನ್ನೂ ಸುವ್ಯವಸ್ಥ ರೀತಿಯಿಂದ ನಡೆಸುತ್ತಿದ್ದರು. ಉಷಾ ಮೆಹ್ತಾರವರು ತಮ್ಮ ಸ್ವಾರ್ಥಕ್ಕಾಗಿ ಎಂದೂ ಏನನ್ನೂ ಬಯಸಿದವರಲ್ಲ. ಮತ್ತು ತಮ್ಮ ಖಚಿತವಾದ ನಿಲುವನ್ನು ಬದಲಾಯಿಸಲು ತಯಾರಿರಲಿಲ್ಲ. ತಮ್ಮ ದಿಟ್ಟ ನಿಲುವಿನಿಂದ ಎತ್ತರವಾದ ಶಿಖರದ ಮೇಲಿರುವ ದೀಪಸ್ತಂಭದಂತಿದ್ದರು. ಯಾರು ಬೇಕಾದರೂ ಅವರನ್ನು ನೋಡಬಹುದಿತ್ತು. ಯಾರೂ ಅವರನ್ನು ನೋಡಿ ಬರಿಗೈಯಿಂದ ಹಿಂದಿರುಗಬೇಕಾದ್ದಿರಲಿಲ್ಲ. ಅವರು ತಮ್ಮ ಕೊಡುಗೈಯಿಂದ ಸಹಾಯ ಮಾಡಿದ್ದನ್ನು ಎಂದೂ ಪ್ರಕಟಪಡಿಸಲು ಹೋಗಲಿಲ್ಲ.

ಮಣಿಭವನ್ : ತಮ್ಮ ಪ್ರಾಧ್ಯಾಪಕ ಸ್ಥಾನದಿಂದ ನಿವೃತ್ತಿ ಹೊಂದಿದ ಮೇಲೆ (1980) ತಮ್ಮ ಸಮಯವನ್ನೆಲ್ಲಾ ಮಹಾತ್ಮರ ನೆನಪಿನ

'ಮಣಿಭವನ' ಮತ್ತು ಮಣಿಭವನ ಸಂಗ್ರಹಾಲಯಕ್ಕೆ ಮೀಸಲಿಟ್ಟಿದ್ದರು. ಮಣಿಭವನದ ಸಂಪರ್ಕ ಇವರಿಗೆ ಅದರ ಶೈಶಾವಸ್ಥೆಯಿಂದ ಇತ್ತು (1955). ಇದು ಮುಂಬಯಿಯ ಗಾಂದೇವಿ, ಲೆಬರ್‌ನಮ್ ರೋಡ್‌ನಲ್ಲಿ ಇದೆ. ಇದು ಸಾಮಾಜಿಕ ಮತ್ತು ಸ್ಥಳೀಯ ರಾಜಕೀಯ ಚಟುಘಟಿಕೆಯ ಕೇಂದ್ರ. ಮಹಾತ್ಮಾ ಗಾಂಧೀಜಿಯವರ ತಂಗಿದ್ದ ಸ್ಥಳ. ಈಗ ಇದು ಮುಂಬಯಿ ವಿಶ್ವವಿದ್ಯಾನಿಲಯದ ಮುಖ್ಯವಾದ ಸಂಶೋಧನಾ ಕೇಂದ್ರವಾಗಿದೆ. ಇಲ್ಲಿ ಗಾಂಧೀಜೀಯವರ ತತ್ವಬೋಧನೆ, ಮಾರ್ಗ ಮತ್ತು ಇದಕ್ಕೆ ಸಂಬಂಧಪಟ್ಟ ವಿಶಯ ಅಭ್ಯಾಸಿಸಲು ಸ್ನಾತಕೋತ್ತರ ಪದವಿಗೆ ಮತ್ತು PhD ಪದವಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡಲಾಗುತ್ತಿದೆ. ಇದರಲ್ಲಿ ಇರತಕ್ಕ ಅಪರೂಪವಾದ ಗ್ರಂಥ ಭಂಡಾರ ಮತ್ತು ಸಿಬ್ಬಂಧಿ ಎಲ್ಲರೂ ನೋಡಲೇಬೇಕಾದದ್ದು. ಇಲ್ಲಿ ಗಾಂಧೀಜಿಯವರ ನೆನಪನ್ನು ಶಾಶ್ವತವಾಗಿ ಇಡಲು ಹಲವಾರು ಯೋಜನೆಗಳಿವೆ. ಇಲ್ಲಿ ನಿಯತಕಾಲದಲ್ಲಿ ಸಂಶೋಧನಾ ಚರ್ಚೆಗಳು, ಕಮ್ಮಟಗಳು ಮತ್ತು ಸಮಾಜದಲ್ಲಿ ಕೆಳಮಟ್ಟದಲ್ಲಿರುವವರನ್ನು ಮುಂದೆ ತರಲು ಹಲವಾರು ಯೋಜನೆಗಳನ್ನು ರೂಪಿಸಿದೆ.

ಮಣಿಭವನ ಮುಂಬೈನಲ್ಲಿ ಮುಖ್ಯಸ್ಥಾನ ಪಡೆದಿದೆ. ಡಾ. ಉಷಾ ಮೆಹ್ತಾರವರ ಅವರ ಮಾನವೀಯತೆಯ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ದೃಷ್ಟಿಕೋಣ ದಿಂದ, ಈ ಸಂಸ್ಥೆಯನ್ನು ಒಂದು ಆದರ್ಶ ಮಾದರಿ ಸಂಸ್ಥೆಯನ್ನಾಗಿ ಮಾಡಿದ್ದಾರೆ.

ಮಣಿಭವನವೇ ಅಲ್ಲದೆ ಉಷಾಬೆನ್‌ರವರು ತಮ್ಮ ನಿರಂತರ ಚಟುವಟಿಕೆಯಿಂದ ಯಾವುದೇ ದಬ್ಬಾಳಿಕೆ ದೌರ್ಜನ್ಯ ಕಂಡರೂ ಅದನ್ನು ಸರಿಯಾದ ರೀತಿಯಲ್ಲಿ ಖಂಡಿಸಿ, ಸಾರ್ವಜನಿಕರಲ್ಲಿ ಕ್ರಾಂತಿಯನ್ನು ಎಬ್ಬಿಸುವರು. ಇದು ಜನರಲ್ಲಿ ಜಾಗ್ರತಿ ಮೂಡಿಸುವ ಯೋಜನೆ. ಉಷಾಬೆನ್‌ರವರಿಗೆ ಮಹಿಳೆಗೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಅತ್ಯಂತ ಕಳಕಳಿ ಮತ್ತು ಮಹಿಳಾ ಶೋಷಣೆ ಎಲ್ಲಿ ಕಂಡರೆ ಅಲ್ಲಿ ಖಂಡನೆ ಮತ್ತು ಇದರ ಬಗ್ಗೆ ತಮ್ಮ ನಿಲುವು, ಮತ್ತು ಮುಂಬೈನಲ್ಲಿ ನಡೆಯುತ್ತಿರುವ ಹಲವಾರು ವೇದಿಕೆಯಲ್ಲಿ ಭಾಗವಹಿಸಿ ತಮ್ಮ ಖಚಿತವಾದ ನಿಲುವನ್ನು ತಿಳಿಸಿದ್ದಾರೆ. ಅವರಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ತ್ರೀಯರ ಬಗ್ಗೆ ಅತ್ಯಂತ ಪ್ರೀತಿ. ಅಷ್ಟೇ ಪ್ರೀತಿ ಈ ಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವವರನ್ನು ಕಂಡರೆ. ಸ್ವಾತಂತ್ರ್ಯ ಪೂರ್ವದ ಮತ್ತು ನಂತರದ ಮಹಿಳೆಯ ಕಷ್ಟ, ನಷ್ಟಗಳನ್ನು ಅವರು ಹೆಚ್ಚು ಅರ್ಥ ಮಾಡಿ ತಮ್ಮ ಸಲಹೆಯನ್ನು ನೀಡಿದ್ದಾರೆ.

ಉಷಾ ಮೆಹ್ತಾರರವರನ್ನು ತೀರ ಹತ್ತಿರದಿಂದ ನೋಡಿದವರಿಗೆ ಅವರ ನುಡಿ ನೋಟ ಒಬ್ಬ ಸನ್ಯಾಸಿನಿಯ ಹಾಗೆ ಕಾಣುತ್ತದೆ. ಆದರೆ ಅವರ ಒಂದು ಮುಗುಳ್ನೋಟ, ಅವರು ಎಲ್ಲರನ್ನೂ ಬರಮಾಡುವಿಕೆಯ ರೀತಿ, ಪ್ರೀತಿಯ ಆಶ್ವಾಸನೆ, ಅವರನ್ನು ನೋಡಿ ಬಂದಮೇಲೆ, ಒಂದು ತೃಪ್ತಿಭಾವನೆ ಆತ್ಮ ವಿಶ್ವಾಸ ಮೂಡುತ್ತದೆ. ಅವರ ಹತ್ತಿರ ಹೋದಾಗ ಯಾವುದೋ ಒಂದು ಪವಿತ್ರವಾದ ಸ್ಥಳಕ್ಕೆ ಹೋದಂತೆ ಅಗುತ್ತೆ. ಅವರಿಗೆ ಯಾವಾಗಲೂ ಇನ್ನೂ ಮುಗಿಯದೆ ಇರುವ ಹಲವಾರು ಕೆಲಸಗಳ ಚಿಂತೆ ಅವರ ಸಾಮಾಜಿಕ ಕಳಕಳಿ ಅವರನ್ನು ಹಣ್ಣಾಗಿಸದೆ, ನಿಜ. ಆದರೆ ಅವರಿಗೆ ಭವಿಷ್ಯದಲ್ಲಿ ಹೆಚ್ಚಿನ ನಂಬಿಕೆ ಇದೆ. ಈ ನಂಬಿಕೆಯನ್ನು ನಮ್ಮ ಯುವಜನಾಂಗಕ್ಕೆ ತುಂಬಿಸುವ ಉಷಾ ಮೆಹ್ತಾರವರನ್ನು ಯುವ ಜನಾಂಗ ಸದಾ ಸುತ್ತುವರಿಯುವದರಲ್ಲಿ ಏನೂ ಆಶ್ಚರ್ಯವಿಲ್ಲ.

ಪುಷ್ಪಾಂಜಲಿ (Pushpanjali) ಅವರಿಗೆ ಅರ್ಪಿತವಾದ (1999) ಗ್ರಂಥ. ಪುಷ್ಪಾಂಜಲಿ ಅವರ ಪ್ರಿಯ ಶಿಶ್ಯರಾದ ಪ್ರೊ. ಶ್ರೀನಿವಾಸನ್, ಉಷಾಠಕ್ಕರ, ಪಾಮ್‌ರಜಪುತರವರ ಶ್ರಮದಿಂದ ಹೊರಬಂದ ಗ್ರಂಥ. ಇದನ್ನು ನೋಡಿ ತುಂಬಾ ಸಂತೋಷಪಟ್ಟರು. ಇದರಲ್ಲಿ ಒಂದು ಲೇಖನ ಬರೆಯುವ ಅವಕಾಶ ನನಗೆ ದೊರಕಿತ್ತು. ಪುಸ್ತಕ ಬಿಡುಗಡೆಯ ಸಮಾರಂಭದ ದಿನ ಎಲ್ಲೋ ಕೂತಿದ್ದ ನನ್ನನ್ನು ಹತ್ತಿರ ಕರೆದು ಒಂದು ಮಣಿಭವನದ ಪುಸ್ತಕ ಮತ್ತು ಒಂದು ಧ್ವನಿಸುರುಳಿ ಎರಡನ್ನೂ ಸ್ವಹಸ್ತದಿಂದ ಕೊಟ್ಟಿದ್ದು ನನ್ನ ಹತ್ತಿರ ಇದೆ. ಇದು ನನ್ನ ಮರೆಯಲಾಗದ ನೆನಪು.

*(ಎಲ್ಲಾ ಮಾಹಿತಿಯನ್ನೂ ಒದಗಿಸಿ ನನ್ನನ್ನು ಬರೆಯಲು ಪ್ರೋತ್ಸಾಹಿಸಿದ ಗುರುಗಳಾದ ಪ್ರೊ. ಆರ್. ಶ್ರೀನಿವಾಸನ್‌ರವರಿಗೆ ನಾನು ಆಭಾರಿ)*

## OBITUARY

Sri B.S. Shankaranarayana Rao popularly known as "Shankru", was born in the year 1928.

After completing his education he migrated to Bombay and joined the legal department of The Ruby Mills Ltd. courtesy Late Shri B. Narayana Swamy. A couple of years later he was promoted as the company secretary of the same organization.

His passion for theatre bordering on obsession was his forte. However his contribution towards the activities of The Mysore Association theatre was very limited. But his contribution to Kannada theatre was very much significant as he was connected with various Kannada Organizations in the city and suburbs.

As he was very fluent and well conversant both in Marathi and Gujarathi, he actively participated, in both the theatres.

His Cameo roles in Gujarathi play brought him much acclaim.

Thus he had the good fortune of associating himself with many stalwarts, like Sri Venkat Rao Talgeri, Sri Sripati Ballal, Sri Atmaram Bende, Dr. Mohan Agashe, etc.

In the year 1983, he returned to Mysore and later on in the 1991 he shifted to Bangalore.

His indifferent health and long illness which finally took his toll and he breathed his last on 8th August 2000.

FOR ALL YOUR DOMESTIC
AND INTERNATIONAL
TRAVEL ARRANGEMENTS

CONTACT

AUGUST
TRAVEL
SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

### ಸಾಂಸ್ಕೃತಿಕ ಪರಂಪರೆ ೩

# ರಾಷ್ಟ್ರಕೂಟರು

✍ ಸುಮಾದ್ವಾರಕನಾಥ

ಕರ್ನಾಟಕದ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ಪ್ರಮುಖರಾಗಿದ್ದಾರೆ. ಇವರ ರಾಜಧಾನಿ ಮಳಖೇಡ ಅಥವಾ ಮಾನ್ಯ ಖೇಟ. ಬಾದಾಮಿ ಚಾಲುಕ್ಯರ ನಂತರ ಪ್ರಬಲರಾದ ಇವರು ಸುಮಾರು ಎರಡೂವರೆ ಶತಮಾನಗಳ ಕಾಲ (ಕ್ರಿ.ಶ. 8ನೇ ಶತಮಾನದಿಂದ 10ನೇ ಶತಮಾನದವರೆಗೆ) ವಿಶಾಲ ಸಾಮ್ರಾಜ್ಯವನ್ನು ಆಳಿದರು. ಇವರ ಆಳ್ವಿಕೆಗೆ ಸೇರಿದಷ್ಟು ಪ್ರಾಂತ್ಯವನ್ನು ಅವರ ಹಿಂದೆ ಅಥವಾ ಅವರ ನಂತರ ಬಂದ ಮತ್ಯಾವ ಕರ್ನಾಟಕ ರಾಜವಂಶವೂ ಆಳಲಿಲ್ಲ. ಅತಹ ವೈಭವಯುತ ಸಾಮ್ರಾಜ್ಯವನ್ನು ಸ್ಥಾಪಿಸಿ, ಕನ್ನಡ ಸಂಸ್ಕೃತಿ,ನಾಡು ನುಡಿಗೆ ರಾಷ್ಟ್ರಕೂಟರು ಸಲ್ಲಿಸಿದ ಸೇವೆ ಸ್ಮರಣೀಯವಾಗಿದೆ.

ಅವರ ಇತಿಹಾಸ ರಚನೆಗೆ ಮುಖ್ಯ ಸಾಧನಗಳು ಶಾಸನಗಳೇ ಆದರೂ ಕನ್ನಡ ಕೃತಿಗಳಾದ 'ಕವಿರಾಜ ಮಾರ್ಗ', ಪಂಪನ 'ವಿಕ್ರಮಾರ್ಜುನ ವಿಜಯ' ಹಾಗೂ ರಾಜಶೇಖರ, ಸೋಮಶೇಖರ, ಸೋಮದೇವ, ಮೇರುತುಂಗ, ಜಿನಸೇನ, ಗುಣಭದ್ರ ಮುಂತಾದವರ ಸಂಸ್ಕೃತ ಬರಹಗಳೂ, ಅರಬ ಪ್ರವಾಸಿಕರಾದ ಸುಲೇಮಾನ್, ಇಬ್ನ್‌ಹೌಕಲ್, ಆಲ್ ಮಸೂದಿ ಮತ್ತು ಅಲ್ ಇಸ್ತಾಖ್ರಿ ಮುಂತಾದವರ ಕಥನಗಳೂ ಪೂರಕ ಸಾಧನಗಳಾಗಿವೆ.

ಮೂಲ: ಮಾಳಖೇಡದ ರಾಷ್ಟ್ರಕೂಟರು ತಾವು ಲಟ್ಟಲೂರಪುರ ವರಾಧೀಶ್ವರರೆಂದು ಕರೆದು ಕೊಂಡಿದ್ದಾರೆ. 'ರಾಷ್ಟ್ರಕೂಟ ಪದದ ಸಂಕ್ಷಿಪ್ತ ರೂಪ 'ರಟ್ಟ' ರಟ್ಟ ಅಥವಾಲಟ್ಟನ ಸ್ಥಳ ಲಟ್ಟನೂರ್ > ಲಾಟೂರು > ಲಾತೂರ್ ಆಗಿದೆ. ಈ ಲಾತೂರ್ ಇಂದು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವ ಲಾತೂರ್, ಅಂದು ಕರ್ನಾಟಕ ರಾಜ್ಯದ ಎಲ್ಲೆಯಾಗಿದ್ದುದನ್ನು ಗುರುತಿಸಲಾಗಿದೆ. ಅಂದಲ್ಲಿ ಮಾಳಖೇಡದ ರಾಷ್ಟ್ರಕೂಟರು ಕರ್ನಾಟಕದವರೇ ಹೊರತು ಬೇರೆಲ್ಲಿಂದಲೂ ಬಂದವರಲ್ಲ.

ರಾಷ್ಟ್ರಕೂಟ ರಾಜ್ಯ ಸ್ಥಾಪಕ ದಂತಿದುರ್ಗ, ತನ್ನ ಶಕ್ತಿ ಸಾಮರ್ಥ್ಯದಿಂದ ಬಹುಬೇಗ ಚಾಲುಕ್ಯರನ್ನು ಮೆಟ್ಟಿ ಒಂದು ಸ್ವತಂತ್ರ ರಾಜ್ಯ ಸ್ಥಾಪನೆಗೆ ಆಸ್ತಿ ಭಾರ ಹಾಕಿದನು. ಇವನಿಗೆ 'ಪೃಥ್ವೀವಲ್ಲಭ', 'ಖಡ್ಗಾವಲೋಕ', 'ಮಹಾರಾಜಾಧಿರಾಜ' 'ರಾಜಪರಮೇಶ್ವರ' ಎಂಬ ಬಿರುದುಗಳಿದ್ದುವು. ದಂತಿದುರ್ಗನ ಅಲ್ಪಕಾಲದ ಆಳ್ವಿಕೆಯ ನಂತರ ಅವನ ತಂದೆಯ ತಮ್ಮ ಕೃಷ್ಣನಿಗೆ ಪಟ್ಟವಾಯಿತು. ಕೃಷ್ಣನ ಒಂದು ಗಣ್ಯಸಾಧನೆಯೆಂದರೆ ಎಲ್ಲೋರದ ಕೈಲಾಸನಾಥ ಮಂದಿರದ ರಚನೆ. ಬೃಹತ್ ಶಿಲೆಯನ್ನು ಕೊರೆಸಿ ರೂಪಿಸಿದ ಕೈಲಾಸ ದೇವಾಲಯವಲ್ಲದೆ, ಇನ್ನೂ 18 ದೇವಾಲಯಗಳನ್ನು ನಿರ್ಮಿಸಿರುವಂತೆ ಕಾಣುತ್ತದೆ. ಕೃಷ್ಣನ ಹಿರಿಯ ಮಗನಾದ ಎರಡನೆಯ ಗೋವಿಂದ ವಿಷಯ ಲೋಲುಪನಾದ್ದರಿಂದ ಸೋದರನಾದ ಧ್ರುವ, ಗೋವಿಂದನನ್ನು ಮೂಲೆಗೊತ್ತಿ ಕ್ರಿ.ಶ. 780 ರಲ್ಲಿ ಅಧಿಕಾರ ವಹಿಸಿಕೊಂಡನು. ಅವನಿಗೆ ಆಗಲೇ 50 ವರ್ಷ ವಯಸ್ಸಾಗಿದ್ದಿತು. ಇವನಿಗೆ 'ಧಾರಾವರ್ಷ', 'ನರೇಂದ್ರದೇವ', 'ಶ್ರೀವಲ್ಲಭ' ಮುಂತಾದ ಬಿರುದುಗಳಿದ್ದುವು. ಇವನ ಹದಿಮೂರು ವರ್ಷಗಳ ಆಡಳಿತದ ಅತ್ಯಂತ ಸಮರ್ಥ'ರಾಜನೆಂದು ಹೆಸರುಗಳಿಸಿದ್ದನು.

ಧ್ರುವನ ಮರಣಾನಂತ ಮೂರನೆಯ ಮಗನಾದ ಗೋವಿಂದ III ರಾಷ್ಟ್ರಕೂಟರಲ್ಲಿ ಗಣ್ಯ ಅರಸು. ತನ್ನ ಭುಜಬಲದಿಂದ ರಾಷ್ಟ್ರ ಕೂಟರಲ್ಲಿ ಸಮರ್ಥ ನೆನೆಸಿಕೊಂಡಿದ್ದ ಗೋವಿಂದ ತನ್ನ ಕೀರ್ತಿ ಪತಾಕೆಯನ್ನು ಕನ್ಯಾಕುಮಾರಿಯಿಂದ ಕನೂಜ್‌ವರೆಗೆ ಹಾರಿಸಿದನು. ''ಹಿಮಾಲಯದ ತಪ್ಪಲ ಹಿಮಕರಗಿದ ನೀರನ್ನು ಗೋವಿಂದನ ಕುದುರೆಗಳು ಕುಡಿದವು. ಅವನ ಅಶ್ವಗಳು ಗಂಗಾಜಲ ಪಾನ ಮಾಡಿದವು'' ಎಂದು ಈ ಯಶಸ್ವೀ ಉತ್ತರ ದಂಡಯಾತ್ರೆಯನ್ನು ಶಾಸನಗಳು ಬಣ್ಣಿಸಿವೆ. ''ರಾಷ್ಟ್ರಕೂಟರ ಪ್ರತಿಷ್ಠೆ ಇನ್ನೆಂದೂ ಈ ಮಟ್ಟಕ್ಕೆ ಏರಲಿಲ್ಲ'' ಎಂದು ಡಾ. ಅಳ್ತೇಕರರು ಅವನ ಸಾಧನೆಯ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ.

ಮೂರನೆಯ ಗೋವಿಂದನ ತರುವಾಯ ಅವನ ಏಕೈಕ ಪುತ್ರ ಅಮೋಘ ವರ್ಷ ಅಧಿಕಾರಕ್ಕೆ ಬಂದಾಗ ಕೇವಲ 14 ವರ್ಷದವನಾಗಿದ್ದ. ಆರಂಭದಲ್ಲಿ, ಅಪ್ರಾಪ್ತ ವಯಸ್ಕನಾದ್ದರಿಂದ ಅವ್ಯವಸ್ಥೆ ತಲೆ ದೋರಿದರೂ ಸ್ವಲ್ಪಕಾಲದಲ್ಲೇ ಪರಿಸ್ಥಿಯನ್ನು ಅರ್ಥಮಾಡಿಕೊಂಡು ಶತ್ರುಗಳ ಪ್ರಾಬಲ್ಯ ಅಡಗಿಸಿ ರಾಜ್ಯದಲ್ಲಿ ಶಾಂತಿ ನೆಲಸುವಂತೆ ಮಾಡಿದ. ಅಂದು ನೆರೆರಾಜ್ಯಗಳೊಡನೆ ಸಂಭವಿಸಬಹುದಾಗಿದ್ದ ಕಲಹಗಳನ್ನು ತಪ್ಪಿಸಲು ಈ ವಿವಾಹ ಸಂಬಂಧವನ್ನು ರಾಜ ತಾಂತ್ರಿಕತೆಯಲ್ಲಿ ಬಳಸಿಕೊಂಡಿರುವುದು ತಿಳಿಯುತ್ತದೆ. ಅವನ ರಾಜ್ಯವನ್ನು ಸಂದರ್ಶಿಸಿದ (851) ಸುಲೇಮಾನ್ ಹೇಳುವಂತೆ ರಾಷ್ಟ್ರಕೂಟರ ಸಾಮ್ರಾಜ್ಯ ಸಮಕಾಲೀನ ವಿಶ್ವದ ನಾಲ್ಕು ವಿಶಾಲ ಸಾಮ್ರಾಜ್ಯಗಳಲ್ಲಿ ಒಂದು. (ಉಳಿದುವೆಂದರೆ ಪೂರ್ವದ ರೋಮನ್ ಸಾಮ್ರಾಜ್ಯ ಅರಬ್ ಸಾಮ್ರಾಜ್ಯ ಹಾಗೂ ಚೀನದ ಸಾಮ್ರಾಜ್ಯ) ಭಾರತದ ಹೊರವಲಯದಲ್ಲೂ ಅಮೋಘ ವರ್ಷನ ಕೀರ್ತಿ ಹರಡಿದ್ದಿತೆಂಬುದನ್ನು ಊಹಿಸಲು ಇದೊಂದು ನಿದರ್ಶನವೇ ಸಾಕು. ಅಮೋಘ ವರ್ಷದ ರಾಜಧಾನಿ ಇಂದ್ರನ ರಾಜಧಾನಿಯನ್ನು ನಾಚಿಸುವಂಥಾದ್ದು' ಎಂಬುದಾಗಿ ಶಾಸನಗಳು ಮಾನ್ಯ ಖೇಟವನ್ನು ವರ್ಣಿಸಿವೆ.

ಮುಂದೆ ಕೃಷ್ಣ II (ಕ್ರಿ.ಶ.-914), ಮೂರನೆಯ ಇಂದ್ರ (ಕ್ರಿ.ಶ. 914-929), ನಾಲ್ಕನೆಯ ಗೋವಿಂದ (ಕ್ರಿ.ಶ. 919-935), ಮೂರನೆಯ ಕೃಷ್ಣ (ಕ್ರಿ.ಶ. 939-967) ನ ಆಳ್ವಿಕೆಯ ನಂತರ ರಾಷ್ಟ್ರಪೂತರ ವಂಶ ಕೊನೆಯಾಯಿತು.

**ಆಡಳಿತ ವ್ಯವಸ್ಥೆ :** ರಾಷ್ಟ್ರ ಕೂಟರು ಅರಸರು ನಿರಂಕುಶ ಪ್ರಭುಗಳಾಗಿರಲಿಲ್ಲ. ಪ್ರಜೆಗಳ ಅಭಿಪ್ರಾಯಕ್ಕೆ ರಾಜನ ಆಸ್ಥಾನದಲ್ಲಿ ಮನ್ನಣೆ ಇದ್ದಿತು. ರಾಜ್ಯದ ಮುಖ್ಯ ವ್ಯವಹಾರಗಳಲ್ಲಿ ಮಂತ್ರಿಗಳ ಸಲಹೆ ಅವಶ್ಯವಿತ್ತು. ಸೈನ್ಯದಲ್ಲಿ ಪದಾತಿಗಳು ಅಶ್ವ ದಳ ಮತ್ತು ಗಜ ದಳ ಇದ್ದವು.

ಮಂತ್ರಿ ಮಂಡಲದ ಪ್ರಮುಖನನ್ನು 'ಪ್ರಧಾನ ಮಂತ್ರಿ' ಎಂದು ಕರೆಯುತ್ತಿದ್ದರು. ವಿದೇಶಾಂಗ ಸಚಿವನನ್ನು 'ಮಹಾಸಂಧಿ ವಿಗ್ರಾಹಕ ' ಎಂದು ಕರೆಯುತ್ತಿದ್ದರು. ಕಂದಾಯ ಮಂತ್ರಿ 'ಅಮಾತ್ಯ'ನಾದರೆ 'ಭಂಡಾರಿ'ಕ ಕೋಶಾಧ್ಯಕ್ಷನ ಕೆಲಸವನ್ನು ಮಾಡುತ್ತಿದ್ದನು. ರಾಷ್ಟ್ರ ಕೂಟದ ಸಾಮ್ರಾಜ್ಯ ಅನೇಕ ಪ್ರಾಂತಗಳಿಂದ ಕೂಡಿದ್ದಿತು. ರಾಷ್ಟ್ರ ಕೂಟ ಸಾಮ್ರಾಜ್ಯದಲ್ಲಿ 20 ಅಥವಾ 25 ರಾಷ್ಟ್ರಗಳಿದ್ದುವೆಂಬದಾಗಿ ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯಾಡಳಿತದ ಪ್ರಥಮ ಘಟಕವೇ ಗ್ರಾಮ. ಗ್ರಾಮಪತಿಯ ಸಲಹೆಗೆ ಗ್ರಾಮ ಸಭೆಗಳಿದ್ದವು. ಪ್ರಾಂತಗಳನ್ನು ಅನ್ಯಕಿರು ಘಟಕಗಳನ್ನೂ ಸಂಖ್ಯಾನುಗುಣವಾಗಿ ವಿಭಜಿಸುವ ಪದ್ಧತಿ ರಾಷ್ಟ್ರಕೂಟರ ಕಾಲದಲ್ಲಿ ಮೊದಲಾದಂತಿದೆ. ಉದಾ : ಬನವಾಸಿ- 1200, ಬೆಳವೊಲ - 300, ಕುಂದರಗೆ - 70 ಧರ್ಮ : ಧಾರ್ಮಿಕ ಸಹಿಷ್ಣುತೆ

ದೃಢವಾಗಿತ್ತು. ಕರಾವಳಿಯಲ್ಲಿ ಇಸ್ಲಾಂ ಜನಪ್ರಿಯವಾಗಿದ್ದು ಮುಸ್ಲಿಂ ಅಧಿಕಾರಿಗಳನ್ನು ರಾಷ್ಟ್ರಕೂಟರು ನೇಮಿಸಿದ್ದರು. ''ರಾಜ ಬಲ್ಹಾರನಂತೆ ಮುಸಲ್ಮಾನರನ್ನು ಗೌರವಿಸುವವರು ಸಿಂಧ್ ಮತ್ತು ಇಂಡ್‌ನಲ್ಲಿ ಬೇರೆ ಯಾರೂ ಇಲ್ಲ'' ಎಂದು ಅಲ್ ಮಸೂದಿ ಹೇಳಿದ್ದಾನೆ. ವೈದಿಕ ಅಮೋಘವರ್ಷನನ್ನು ಜೈನನೇ ಎಂದು ಭಾವಿಸುವಷ್ಟು ಆ ಮತದ ಪರವಾಗಿದ್ದನು. ಸಾಲೊಟಗಿಯಲ್ಲಿ ಶಿವವಿಷ್ಣುಗಳ ಜಂಟಿ ಅರ್ಚನೆ ನಡೆಸುವ ಒಂದು ದೇವಾಲಯವಿತ್ತು. ಆ ಕಾಲದ ಶಿವಾಲಯಗಳಲ್ಲೆಲ್ಲ ವೈಷ್ಣವ ಶಿಲ್ಪಗಳೂ ಇವೆ. ಕರಗುದರಿಯಲ್ಲಿ ಶಿವ, ವಿಷ್ಣು ಸೂರ್ಯರ ಆರಾಧನೆಗೆ ಒಂದು ದೇವಾಲಯವಿತ್ತು.

**ಶಿಕ್ಷಣ ಮತ್ತು ಸಾಹಿತ್ಯ :** ರಾಷ್ಟ್ರಕೂಟರ ಕಾಲ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದ ಬೆಳವಣಿಗೆಯಲ್ಲಿ ಒದು ಪರ್ವಕಾಲವಾಗಿದೆ. ವಿದ್ಯಾರ್ಜನೆ ಬ್ರಾಹ್ಮಣ ಮತ್ತು ವೈಶ್ಯರಲ್ಲಿ ಪ್ರಮುಖವಾಗಿತ್ತು. ಸಂಸ್ಕೃತ, ವೇದ,ಜ್ಯೋತಿಷ್ಯ, ತರ್ಕ ಶಾಸ್ತ್ರ, ಪುರಾಣಗಳು ಪ್ರಮುಖ ಭೋದನಾ ವಿಷಯಗಳಾಗಿದ್ದವು. ಮಠಗಳು, ಅಗ್ರ ಹಾರಗಳು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಅಂದಿನ ಪ್ರಮುಖ ವಿದ್ಯಾಕೇಂದ್ರ ಗಳಾಗಿದ್ದವು. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 'ಸಾಲೊಟಗಿ' ಪ್ರಮುಖ ವಿದ್ಯಾಕೇಂದ್ರವಾಗಿತ್ತು.

ತ್ರಿವಿಕ್ರಮನು ಈ ಕಾಲದ ಪ್ರಥಮ ಗಣ್ಯ ಕವಿಯಾಗಿದ್ದು ಅವನ 'ನಳಚಂಪು' ಸಂಸ್ಕೃತದ ಪ್ರಥಮ ಚಂಪು ಕಾವ್ಯ. ವೇಮುಲವಾಡದ ಅರಿಕೇಸರಿಯ ಅಸ್ಥಾನಿಕ ಸೋಮದೇವಸೂರಿ ಯಶಸ್ತಿಲಚಂಪುವಿನಲ್ಲಿ ಯಶೋಧರ ಅಮೃತಮತಿಯರ ಜೈನಕಥೆಯನ್ನು ಹೇಳಿದ್ದಾನೆ. ಗಣ್ಯ ವಿದ್ವಾಂಸರನೇಕರು ಆಗ ಇದ್ದರು. ಇದಲ್ಲದೆ ಜಿನಸೇನನ 'ಆದಿ ಪುರಾಣ' ಗುಣಭದ್ರನ 'ಉತ್ತರ ಪುರಾಣ', ಗುಣಭದ್ರನ 'ಉತ್ತರ ಪುರಾಣ' 'ಆತ್ಮಾನುಶಾಸನ' ರಚಿತವಾಗಿದೆ. ಪುಷ್ಪದಂತ 'ಮಹಾಪುರಾಣ', ಶಾಕಟಾಯನನ 'ಅಮೋಘ ವೃತ್ತಿ' (ವ್ಯಾಕರಣ ಗ್ರಂಥ) ಮಹಾವೀರಾಚಾರ್ಯನ ಗಣಿತಸಾರ ಸಂಗ್ರಹ' ಈ ಕಾಲದ ಗಣ್ಯ ವೈಜ್ಞಾನಿಕ ಗ್ರಂಥವಾಗಿದೆ. ಮಾಣಿಕ್ಯ ನಂದಿ, ಮಲ್ಲನಂದಿ ಹಾಗೂ ಪ್ರಭಚಂದ್ರರು ಈ ಕಾಲದ ಗಣ್ಯ ಜೈನ ತಾರ್ಕಿಕ ಲೇಖಕರು. ಅಮೋಘ ವರ್ಷನುಸ್ವತಃ 'ಪ್ರಶ್ನೋತ್ತರ ರತ್ನಮಾಲಾ, ಬರೆದಿದ್ದಾನೆ. ಪಂಪ, ಪೊನ್ನರು ಈ ಕಾಲದ ಗಣ್ಯ ಕನ್ನಡ ಕವಿಗಳು, ಪಂಪನು ವೇಮುಲವಾಡದ ಮಾಂಡಲಿಕ ಅರಿ ಕೇಸರಿಯ ಅಸ್ಥಾನದಲ್ಲಿದ್ದು 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ'ವನ್ನು ಬರೆದನು. ಎರಡನೆಯದು ಕನ್ನಡದಲ್ಲಿ ಅದ್ವಿತೀಯ ಪ್ರಾಚೀನ ಕಾವ್ಯವಾಗಿದ್ದು ಪಂಪನು ನಾಡೋಜನೂ, ಆದಿಕವಿಯೂ ಎನಿಸಿದ್ದಾನೆ. ಪೊನ್ನನು ಕೃಷ್ಣ III ನ ಅಸ್ಥಾನಕವಿ. ಕವಿ ಚಕ್ರವರ್ತಿ 'ಶಾಂತಿ ಪುರಾಣ' 'ಭುವನೈಕ ರಾಮಾಭ್ಯುದಯ' ಹಾಗೂ 'ಗತ ಪತ್ಯಾಗತ' ಅವನ ಕೃತಿಗಳು. ಪಂಪ ಮತ್ತು ರನ್ನರ ಜೊತೆ ಸೇರಿಸಿ ಪೊನ್ನನನ್ನು ಕನ್ನಡದ ರತ್ನ ತ್ರಯದಲ್ಲಿ ಒಬ್ಬನೆಂದಿದ್ದರೂ ಉಳಿದಿಬ್ಬರ ಮಟ್ಟಕ್ಕೆ ಆತನು ಬಾರನು. ಕವಿರಾಜ ಮಾರ್ಗವು ದಂಡಿಯ ಸಂಸ್ಕೃತ ಕಾವ್ಯಾದರ್ಶನ ಭಾಷಾಂತರವಾಗಿದ್ದು ಶ್ರೀ ವಿಜಯನು ಇದನ್ನು ನೃಪತುಂಗಾನು ಮತದಿಂದ ರಚಿಸಿದ. ಇದು ಕನ್ನಡದ ಅತಿ ಪ್ರಾಚೀನ ಗ್ರಂಥ ಎಂದು ತಿಳಿದು ಬಂದಿದೆ. ಕನ್ನಡನಾಡು, ನುಡಿಗೆ ಈ ಜೈನಾಚಾರ್ಯರು ನೀಡಿರುವ ಕೊಡುಗೆ ಗಮನಾರ್ಹ ಹಾಗೂ ಅಪೂರ್ವವಾಗಿದೆ.

**ಕಲೆ ಮತ್ತು ವಾಸ್ತು ಶಿಲ್ಪ :** ಪ್ರಾಚೀನ ಭಾರತದ ಉನ್ನತ ಕಲಾ ಚೆಲುವನ್ನು ಅರಿಯಲು ರಾಷ್ಟ್ರಕೂಟ ಕಲಾಕೃತಿಗಳ ಅವಲೋಕನ ಅತ್ಯವಶ್ಯ. ಕಲಾಭಿಮಾನಿಗಳಾದ ರಾಷ್ಟ್ರಕೂಟ ಅರಸರು ಕಲಾಭಿವೃದ್ಧಿಗಾಗಿ ಹೇರಳ ಸಂಪತ್ತನ್ನು ವಿನಯೋಗಿಸಿದ್ದಾರೆ. ಅವರ ಔದಾರ್ಯದ ಫಲವಾಗಿ ಇಂದು ಅವರು ಸೃಷ್ಟಿಸಿದ ಅಮೋಘ ಕಲಾಕೃತಿಗಳು ರಾಷ್ಟ್ರದ ಹೆಮ್ಮೆಯ ಸ್ಮಾರಕಗಳಾಗಿ ಉಳಿದಿವೆ. ಎಲ್ಲೋರ ಹಾಗೂ ಎಲಿಫೆಂಟಾಗಳಲ್ಲಿನ ಅವರ ಸುಂದರ ದೇವಾಲಯಗಳು ಹಾಗೂ ವಿಗ್ರಹಗಳು ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಎಲ್ಲೋರದಲ್ಲಿ ಒಂದನೆಯ ಕೃಷ್ಣನು ಬಂಡೆಯನ್ನು ಕೊರೆದು ನಿರ್ಮಿಸಿರುವ ಕೈಲಾಸನಾಥ ದೇವಾಲಯ ಅತ್ಯುತ್ತಮವಾದ ಕಲಾಕೃತಿ ಇದರಲ್ಲಿ ಒಂದೇ ಒಂದು ಹುಟ್ಟು ಬಂಡೆಯಿಂದ ಮಹಾದ್ವಾರ ಪ್ರಕಾರ, ಶಿಖರ, ಕಲಶ, ಲಿಂಗ ಮೊದಲಾದ ಸರ್ವಾಂಗಗಳಿಂದ ಕೂಡಿದ ಎರಡು ಅಂತಸ್ತಿನ ದ್ರಾವಿಡ ಶೈಲಿಯ ದೊಡ್ಡ ದೇವಾಲಯವನ್ನು ನಿರ್ಮಿಸಲಾಗಿದೆ. 226 ಅಡಿ ಉದ್ದ, 154 ಅಡಿ ಅಗಲವಾಗಿರುವ ಒಂದು ಅಂಗಳದ ಮಧ್ಯದ ಕಲ್ಲಿನಲ್ಲಿ ರೂಪುಗೊಂಡಿರುವ ಈ ದೇವಾಲಯ 164 ಅಡಿ ಉದ್ದವೂ, 109 ಅಡಿ ಅಗಲವೂ, 92 ಅಡಿ ಎತ್ತರವುಳ್ಳದ್ದಾಗಿದೆ. ಈ ದೇವಾಲಯದ ಬಳಿ ಎರಡು ಕಂಭಗಳು ಮತ್ತು ಎರಡು ದೊಡ್ಡ ಆನೆಗಳನ್ನು ಕೊರೆಯಲಾಗಿದೆ. ವಿಷ್ಣುವಿನ ಅವತಾರ ಹಾಗೂ ಶಿವನ ಲೀಲೆಗೆ ಸಂಬಂಧಪಟ್ಟ ಮೂರ್ತಿಗಳನ್ನು ದೇವಾಲಯದ ಇಕ್ಕೆಡೆಗಳಲ್ಲೂ ಕೆತ್ತಲಾಗಿದೆ. ''ಅಗಾಧವೂ ರಮ್ಯವೂ ಆದ ಆ ಮಹಾದೇವಾಲಯವು ಭಾರತೀಯ ಶಿಲ್ಪಿಗಳ ಸಾಹಸಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಡಾ. ವಿ. ಎಂ. ಸ್ಮಿತ್ ಈ ದೇವಾಲಯವನ್ನು ಪ್ರಪಂಚದ ಆಶ್ಚರ್ಯಗಳಲ್ಲಿ ಒಂದು'' ಎಂಬುದಾಗಿ ಪರಿಗಣಿಸಿದ್ದಾರೆ. ವಿಶ್ವಕರ್ಮನೆಂಬ ಶಿಲ್ಪಿ ದೇವಾಲಯದ ನಿರ್ಮಾಪಕನೆಂಬ ಐತಿಹ್ಯವಿದೆ.

ಕೈಲಾಸನಾಥ ದೇವಾಲಯವಲ್ಲದೆ ಎಲ್ಲೋರ ದಲ್ಲಿ ಅನೇಕ ಗುಹಾಂತರ್ದೇ ವಾಲಯಗಳಿವೆ. ಅವುಗಳಲ್ಲಿ ಮುಖ್ಯವಾದುವು. ರಾವಣ್ ಕಖಾಯ್, ದಶಾ ವತಾರಗುಹೆ, ರಾಮೇಶ್ವರಗುಹೆ, ನೀಲಕಂಠ ಗುಹೆ, ಇಂದ್ರ ಸಭಾ ಮತ್ತು ಜಗನ್ನಾಥ ಸಭಾ.

ಮುಂಬೈ ಬಳಿಯ ಎಲಿಫೆಂಟಾದ ಗುಹಾರಚನೆ ಇದೇ ಕಾಲದ ಇನ್ನೊಂದು ಭವ್ಯವಾಸ್ತು. ಬೌದ್ಧ ಚೈತ್ಯದಂತಿರುವ ಇದು 130 ಅಡಿ ಉದ್ದವಾಗಿದ್ದು 129 ಅಡಿ ಅಗಲವಾಗಿದ್ದು ಕೇಂದ್ರ ಭವನಕ್ಕೆ ಪ್ರವೇಶನೀಡುವ ಮೂರು ಪ್ರವೇಶದ್ವಾರಗಳಿವೆ. ಆಯತಕಾರದ ಕೇಂದ್ರ ಭವನದ ಒಂದು ಕೊನೆಗೆ ಸ್ವತಂತ್ರವಾದ ಒಂದು ಗರ್ಭಗೃಹವಿದ್ದು ಅದರಲ್ಲಿ ಲಿಂಗವಿದೆ. ನಡುವಿನ ಬಾಗಿಲ ಎದುರಿಗೆ ಹಿಂದಣ ಗೋಡೆಯ ಮೇಲೆ 25 ಅಡಿ ಎತ್ತರದ ಮೂರು ಮುಖಗಳ ಮಹೇಶ ಮೂರ್ತಿಯ ಭವ್ಯ ಶಿಲ್ಪವಿದೆ. ಭಾರತದಲ್ಲಿಯೇ ಉತ್ಕೃಷ್ಟವಾದ ಶಿಲ್ಪವಿದು'' ಇದರಲ್ಲಿನ ಎರಡು ಘನ ಗಾತ್ರ ದ್ವಾರಪಾಲರ ಶಿಲ್ಪಗಳೂ ಗೋಡೆಯ ಮೇಲಿನ ಅರ್ಧನಾರೀಶ್ವರ, ಶಿವ, ಪಾರ್ವತಿ ಮುಂತಾದ ಉಬ್ಬು ಶಿಲ್ಪಗಳೂ ಭಾರತದಲ್ಲಿಯೇ ಗಣ್ಯವಾದ ಸುಂದರ ಕೆತ್ತನೆಗಳು ''ಇಂಥ ಇನ್ನೆಲ್ಲಾ ರಚನೆಗಳಿಗಿಂತಲೂ ಎಲಿಫೆಂಟಾ ದೇವಾಲಯ ಉತ್ಕೃಷ್ಟವಾದುದು ಎಂದು ಪರ್ಸಿ ಬ್ರೌನ್ ಹೇಳುತ್ತಾರೆ.

ಇಲ್ಲಿನ ಕಂಬಗಳು 15 ಅಡಿ ಎತ್ತರವಾಗಿದ್ದು ಅವುಗಳ ಕಾಂಡ ಉದ್ದಕ್ಕೂ ಕೊಳವೆಗಳನ್ನು ಕೊಯ್ದು ಹೊರ ಮುಖವಾಗಿ ಜೋಡಿಸಿದಂತೆ ಕೆತ್ತನೆಯಿರುವ, ಸ್ತಂಭಾಕಾರವಾಗಿ ಇವೆ. ಮೇಲ್ಗಡೆ ಸಿಹಿಕುಂಬಳ ಕಾಯಂಥ ಅಂಚುಗಳಿರುವ ಚಪ್ಪಟೆದಿಂಬಿನ ರಚನೆ ಇದೆ. ಎಲ್ಲೋರದ 'ಧುಮರ್ ಲೇಣ' ಜೋಗೇಶ್ವರ ಗವಿ (ಮುಂಬೈ ಬಳಿ) ಇದೇ ಕಾಲದ ಇತರ ರಚನೆಗಳು. ಎಲಿಫೆಂಟಾದ ಮೊದಲ ಹೆಸರು 'ಶ್ರೀಪುರಿ',

'ಗೋರವಪುರಿ', ದೌರಾಪುರಿ ಇದಕ್ಕೆ 'ಎಲಿಫೆಂಟಾ' ಎಂದು ಹೆಸರು ಬಂದಿದ್ದು ಪೋರ್ಚುಗೀಸರ ಕಾಲದಲ್ಲಿ ಈ ದ್ವೀಪದಲ್ಲಿರುವ ಬೃಹತ್‌ಶಿಲಾ ಆನೆಯ ವಿಗ್ರಹದಿಂದಾಗಿ ಈ ಹೆಸರು ಬಂದಿತು. ಕ್ರಿ.ಶ. 3 ರಿಂದ 11ನೇ ಶತಮಾನದವರೆಗೆ ವೈಭವದಿಂದ ಮೆರೆದ ಈ ದ್ವೀಪದಲ್ಲಿ ಅನೇಕ ಪ್ರಾಚೀನ ಅವಶೇಷಗಳು ಇವೆ.

ಈ ಗುಹೆಗಳನ್ನು ನಿರ್ಮಿಸಿದವರು ರಾಷ್ಟ್ರಕೂಟರ ಸಾಮಂತರಾದ 'ಶಿಲಾಹಾರ' ವಂಶದ ಅರಸರು. ರಾಷ್ಟ್ರಕೂಟ ಸಾಮ್ರಾಜ್ಯದ ಶಿಲ್ಪಿಗಳನ್ನು ಆಮಂತ್ರಿಸಿ ಈ ಗುಹೆಗಳನ್ನು ಕೊರೆಯಿಸಿದ್ದಾರೆ. ಹೀಗೆ ಎಲಿಫೆಂಟಾ ರಾಷ್ಟ್ರರ ಕೂಟರ ಕಾಲದ ಕೇಂದ್ರವಾಯಿತು. 'ಎಲ್ಲೋರ' ರಾಷ್ಟ್ರ ಕೂಟರ ವಾಸ್ತುಶಿಲ್ಪದ ತವರಾದರೆ ಎಲಿಫೆಂಟಾ ಅವರ ಮೂರ್ತಿ ಶಿಲ್ಪದ ಶ್ರೇಷ್ಠ ನಿದರ್ಶನವಾಗಿದೆ. ಇದು ವಾಸ್ತು ಶಿಲ್ಪ ಮತ್ತು ಮೂರ್ತಿ ಶಿಲ್ಪಗಳ ಮೇಲೆ ಮಾಸಲಾರದ ಪ್ರಭಾವ ಬೀರಿತು. ಎಲ್ಲೋರಾ ಮತ್ತು ಎಲಿಫೆಂಟಾ ಕಲಾ ಕ್ಷೇತ್ರಗಳಲ್ಲಿ ಮೂರ್ತಿ ಪೂಜೆಯ ಅಸ್ತಿತ್ವದ ಪ್ರಭಾವ ಪರಿಣಾಮಗಳನ್ನು ಕಾಣಬಹುದು. ಮೂರ್ತಿ ಶಿಲ್ಪದ ಅಸಾಧಾರಣ ಸಾಧನೆಯಕೇಂದ್ರ ಎಲಿಫೆಂಟಾ ಆಯಿತು.

ಭಾರತದ ಇತಿಹಾಸದಲ್ಲಿ ಈ ಕಾಲವನ್ನು "ಕನೋಜ ಸಾಮ್ರಾಜ್ಯದ ಕಾಲ (Age of imperial Kanoaj) ಎಂದು ಕರೆದಿದ್ದಾರೆ. ವಾಸ್ತವವಾಗಿ ಇದನ್ನು ಕರ್ನಾಟಕ ಸಾಮ್ರಾಜ್ಯದ ಕಾಲ"ದ ಎನ್ನುವುದೇ ಹೆಚ್ಚು ಸೂಕ್ತ. ಏಕೆಂದರೆ ರಾಷ್ಟ್ರ ಕೂಟರ ಸಾಮ್ರಾಜ್ಯ ಭಾರತದಲ್ಲಿಯೆ ಹಿರಿದು ಎಂದು ಸುಲೇಮಾನ್ ತಿಳಿಸಿದ್ದಾನೆ. ಭಾರತದ ಗಣ್ಯ ಅರಸರಾದ ಗೂರ್ಜರ ಪ್ರತೀಹಾರ, ಪಾಲ ಹಾಗೂ ಪಲ್ಲವರನ್ನೂ ರಾಷ್ಟ್ರಕೂಟರು ಸೋಲಿಸಿ ಕಪ್ಪ ಸಂಗ್ರಹಿಸಿದ್ದರಲ್ಲದೆ ಆಗಿನ ಭಾರತದ ಅಧಿರಾಜತ್ವದ ಪೀಠ ಸ್ಥಾನವೆನಿಸಿದ್ದ (ಸೀಟ್ ಆಫ್ ಪ್ಯಾರ ಮೌಂಸಿ) ಕನೋಜದ ಅರಸರಿಂದಲೂ ಕಪ್ಪ ಸಂಗ್ರಹಿಸಿದ್ದರು.

ಹೀಗೆ ರಾಷ್ಟ್ರಕೂಟರು ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸಕ್ಕೆ ಅಪಾರಕೊಡುಗೆ ನೀಡಿದ್ದಾರೆ. ಕನ್ನಡ ನಾಡಿನ ಸಂಸ್ಕೃತಿ ಯನ್ನು ಸಂರಕ್ಷಿಸಿ ಅದು ವಿಶಾಲವಾಗಿ ಅಭಿವೃದ್ಧಿಗೊಳ್ಳುವಂತೆ ಶ್ರಮಿಸಿದ್ದಾರೆ. ರಾಷ್ಟ್ರಕೂಟ ಅರಸರು ತಮ್ಮ ಶೌರ್ಯ ಪ್ರತಿಭೆ ಸಾಹಸಗಳಿಂದ ಭಾರತೀಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇವರ ಆಳ್ವಿಕೆಯ ಕಾಲವು ಕರ್ನಾಟಕ ಇತಿಹಾಸದಲ್ಲಿ ಮಹತ್ವ ಪೂರ್ಣವಾದ ಕಾಲವಾಗಿದೆ.

●

## ಎನ್.ಕೆ.ಇ.ಎಸ್. ಶಾಲೆಯಲ್ಲಿ ವಿಶ್ವೇಶ್ವರಯ್ಯನವರ 139ನೆಯ ಜನ್ಮದಿನಾಚರಣೆ



*ಅಂದಿನ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿದ್ದ ಡಾ. ಸುಬ್ರಮಣ್ಯನ್‌ವರು ಪ್ರದರ್ಶನವನ್ನು ಉದ್ಘಾಟಿಸಿ, ವೀಕ್ಷಿಸುತ್ತಿರುವುದು.*

ವಡಾಲಾದಲ್ಲಿರುವ NKES ಕನ್ನಡ ಶಾಲೆಯಲ್ಲಿ ಸೆಪ್ಟಂಬರ್ 18ರಂದು ವಿಶ್ವೇಶ್ವರಯ್ಯನವರ 139ನೆಯ ಜನ್ಮ ದಿನವನ್ನು ಆಚರಿಸಲಾಯಿತು. ಪ್ರತಿವರ್ಷದಂತೆ ಅಂದು ಶಾಲಾ ಮಕ್ಕಳಿಂದ ವಿಜ್ಞಾನ ಮಾದರಿಗಳ ಪ್ರದರ್ಶನ,



*ಕನ್ನಡ ಶಾಲೆಯ ಡ್ರಾಯಿಂಗ್ ಮಾಸ್ತರ್ ಶಂಕರ್ ಗಾಂಧ್ರ ಅವರು ರಂಗೋಲಿಯಲ್ಲಿ ಚಿತ್ರಿಸಿದ ಡಾ. ರಾಜ್‌ಕುಮಾರ್ ಮತ್ತು ಡಾ. ವಿಶ್ವೇಶ್ವರಯ್ಯನವರ ಚಿತ್ರ*

ರಂಗೋಲಿ ಮತ್ತು ಚಿತ್ರಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅಂದಿನ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿದ್ದ ಡಾ| ಎಸ್. ಸುಬ್ರಮಣ್ಯನ್ ಅವರು ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡುತ್ತ, ವಿಶ್ವೇಶ್ವರಯ್ಯನವರು ದೇಶಕ್ಕೆ ಕೊಟ್ಟ ಅಪಾರ ಕೊಡುಗೆಯ ಬಗ್ಗೆ ತಿಳಿಸಿದರು ಮತ್ತು ಉತ್ತಮ ಮಟ್ಟದ ಮಾದರಿಗಳನ್ನೂ, ರಂಗೋಲಿ ಮತ್ತು ಚಿತ್ರಗಳನ್ನೂ ಪ್ರದರ್ಶಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸಿದರು.

ಉತ್ತಮವಾದ ಮಾದರಿಗಳು ಹಾಗೂ ರಂಗೋಲಿ ಮತ್ತು ಚಿತ್ರಗಳಿಗೆ ಬಹುಮಾನವನ್ನಿತ್ತು ಉತ್ತೇಜಿಸಲಾಯಿತು.

ಇದೇ ಸಂದರ್ಭದಲ್ಲಿ ಅನೇಕ ವರ್ಷಗಳಿಂದ ಶಾಲೆಗೆ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಅಧ್ಯಾಪಕಿ ಶ್ರೀಮತಿ ಪ್ರಭಾ ರಾವ್ ಅವರಿಗೆ ಅವರ ಸೇವಾ ನಿವೃತ್ತ ಜೀವನದಲ್ಲಿ ಎಲ್ಲರೂ ಸೇರಿ ಶುಭ ಕೋರಿದರು.

### ಪೇಜಾವರ ಸದಾಶಿವರಾವ್ ಸ್ಮಾರಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮುಂಬಯಿ : ಕನ್ನಡದ ಪ್ರತಿಭಾವಂತ ಹೊಸ ಕವಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಮುಂಬಯಿಯ ಕರ್ನಾಟಕ ಸಂಘವು ಕನ್ನಡದ ನವ್ಯ ಕಾವ್ಯಮಾರ್ಗದಲ್ಲಿ ಮೊದಲ ಹೆಜ್ಜೆಯನ್ನಿಟ್ಟ

ಪ್ರತಿಭಾವಂತ ಕವಿ ದಿ| ಪೇಜಾವರ ಸದಾಶಿವರಾವ್ ಅವರ ಸ್ಮರಣಾರ್ಥ ಕೊಡಮಾಡುವ ಪ್ರಶಸ್ತಿಯ 2000ನೇ ಸಾಲಿನ ಪ್ರಶಸ್ತಿಗಾಗಿ ಕವನ ಸಂಕಲನಗಳನ್ನು ಆಹ್ವಾನಿಸಿದೆ. ರೂ. 1,100/- ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಈ ಪ್ರಶಸ್ತಿಯ ವಿವರಗಳು ಈ ಕೆಳಗಿನಂತಿದೆ.

೧. ಕರ್ನಾಟಕದ ಒಳ ಹೊರಗಿದ್ದು 27 ವರ್ಷದೊಳಗಿರುವ ಯುವ ಕನ್ನಡ ಕವಿಗಳು ಈ ಸ್ಪರ್ಧೆಗಾಗಿ ತಮ್ಮ ಕವನ ಸಂಕಲನಗಳನ್ನು ಕಳುಹಿಸಬಹುದು.

೨. ಬಹುಮಾನ ನೀಡುವ ವರ್ಷದ ಹಿಂದಿನ ಎರಡು ವರ್ಷಗಳಲ್ಲಿ ಪ್ರಕಟವಾದ ಆಯಾ ಕವಿಗಳ ಪ್ರಥಮ ಕವನ ಸಂಗ್ರಹವನ್ನು ಮಾತ್ರ ಪರಿಗಣಿಸಲಾಗುವುದು.

೩. ಕವನ ಸಂಕಲನದ ಮೂರು ಪ್ರತಿಗಳನ್ನು ಲಕೋಟೆಯ ಮೇಲೆ ಪೇಜಾವರ ಸದಾಶಿವ ರಾವ್ ಸ್ಮಾರಕ ಪ್ರಶಸ್ತಿಗಾಗಿ ಎಂದು ಸ್ಪಷ್ಟವಾಗಿ ನಮೂದಿಸಿ 2000ರ ಅಕ್ಟೋಬರ್ 15ರ ಒಳಗಾಗಿ ಕಳುಹಿಸಿ ಕೊಡಬೇಕು. ಸ್ಪರ್ಧೆಗಳಿಗೆ ಪ್ರವೇಶ ಶುಲ್ಕವಿಲ್ಲ.

೪. ಸ್ಪರ್ಧೆಗೆ ಕಳುಹಿಸಿದ ಕೃತಿ ತನ್ನ ಪ್ರಥಮ ಕಾವ್ಯ ಸಂಕಲನವೆಂಬ ಸ್ವಂತ ಪ್ರಮಾಣ ಪತ್ರವನ್ನು ಕೃತಿಗಳೊಂದಿಗೆ ಕಳುಹಿಸಬೇಕು.

೫. ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂತಿರುಗಿಸಲಾಗುವುದಿಲ್ಲ. ನಿರ್ಣಾಯಕ ಸಮಿತಿಯ ತೀರ್ಮಾನವೇ ಅಂತಿಮ ಹಾಗೂ ಈ ಬಗ್ಗೆ ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ. ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ

Hon. Gem Secretary. Karnataka Sanhga, Mogul Lane, Off. T.H. Kataria Marg, Mahim (W), Mumbai-400 016.

**ಭಾವೈಕ್ಯತೆಯ ಶ್ರೀ ಮಹಾಗಣಪತಿ ಉತ್ಸವ**

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ಆಶ್ರಯದಲ್ಲಿ ಶ್ರೀ ಮಹಾಗಣಪತಿ ಉತ್ಸವವನ್ನು ಮೂರು ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲಾಯಿತು.

ಮೊದಲನೆಯದಿನ ವಿದ್ಯಾಲಯದ ಹಾಡುಗಾರಿಕೆ ವಿದ್ಯಾರ್ಥಿವೃಂದದಿಂದ ಸಂಗೀತ ನಡೆಯಿತು. ಸೀನಿಯರ್ ವಿದ್ಯಾರ್ಥಿಗಳಾದ ಅಗುಣ, ಸುಬ್ರಹ್ಮಣ್ಯರವರ ರಾಗಾಲಾಪನೆ, ಸ್ವರ ಪ್ರಸಾರಗಳು ರಸಿಕರ ಮೆಚ್ಚುಗೆಗೆ ಪಾತ್ರವಾಯಿತು. ವಿದುಷಿ ಶ್ಯಾಮಲರವರ ಕಚೇರಿಯು ಕಳೆಗಟ್ಟಿ ತಾವು ಉತ್ತಮ ಕಲಾವಿದರ ಪಂಕ್ತಿಗೆ ಸೇರಿದವರೆಂದು ಸೂಚಿಸಿದರು.

ಎರಡನೆಯ ದಿನ ವಿದ್ಯಾಲಯದ ವಾದ್ಯ ವಿದ್ಯಾರ್ಥಿ ವೃಂದದಿಂದ ವಾದ್ಯ ವೃಂದ ನಡೆಯಿತು.

ಕೊನೆಯ ದಿನ ವಿದ್ಯಾರ್ಥಿ ವೃಂದವು 'ಶ್ರೀ ಗಣಪತಿ ಭಾವೈಕ್ಯ ಸಂಗೀತ ಮಾಲಿಕಾ' ಕಾರ್ಯಕ್ರಮವನ್ನು ಸಾದರ ಪಡಿಸಿದರು. ವಿದ್ಯಾಲಯದ ಪ್ರಾಂಶುಪಾಲರಾದ ವಿದುಷಿ ಉಮಾನಾಗಭೂಷಣ್‌ರವರು ಭಾರತೀಯ ಭಾಷೆಗಳಾದ ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಮಲೆಯಾಳಂ ಹಿಂದಿ, ಮರಾಠಿ, ಕೊಂಕಣಿ, ಗುಜರಾತಿ, ಬೆಂಗಾಲಿ ಭಾಷೆಗಳಲ್ಲಿ ಗಣಪತಿಯ ಕೃತಿಯನ್ನು ಆಯ್ದು, ಕರ್ನಾಟಕ, ಹಿಂದೂಸ್ತಾನಿ, ಸುಗಮ, ಜಾನಪದ ಶೈಲಿಯಲ್ಲಿ ರಾಗ ಸಂಯೋಜಿಸಿ ವಿದ್ಯಾರ್ಥಿಗಳನ್ನು ತಯಾರಿಸಿ ಸಾದರಪಡಿಸಬೇಕೆಂದ ಆಹ್ವಾನಿಸಿದುದು ಕಾರ್ಯಕ್ರಮದ ಗುಣಮಟ್ಟಕ್ಕೆ ದ್ಯೋತಕವಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಶ್ರೀ ವೆಂಕಟೇಶ ಪೈ, ಶ್ರೀ ಶಂಕರ ಎನ್. ಶೆಟ್ಟಿಯವರು ವಿದ್ಯಾಲಯದ ಚಟುವಟಿಕೆಗಳನ್ನು ಪ್ರಶಂಸಿಸಿ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, ವಿದ್ಯಾಲಯಕ್ಕೆ ಯಶಸ್ಸನ್ನು ಕೋರಿದರು. ಡೊಂಬಿವಲಿಯ ಪ್ರಮುಖ ಕನ್ನಡಿಗರಲ್ಲೊಬ್ಬರಾದ ಶ್ರೀ ಬಿ.ಜಿ. ಪೈರವರು ವಿದ್ಯಾರ್ಥಿ ವೃಂದದ ಗಾಯನ ಕಲೆಯನ್ನು ಮೆಚ್ಚಿ, ಎಲ್ಲ ವಿದ್ಯಾರ್ಥಿಗಳಿಗೂ ತಮ್ಮ ಮೆಚ್ಚುಗೆಯ ಕುರುಹಾಗಿ ಶ್ರೀ ಗಣಪತಿಯ ಪ್ರತಿಮೆಯನ್ನು ಕೊಡುಗೆಯಾಗಿ ನೀಡಿದರು.

**ಕನ್ನಡ ಸಂಘ, ಕೆ.ಜೆ. ಸೋಮಯ್ಯ ಕಾಲೇಜು**

ಪರಿಶ್ರಮದ ಜ್ಞಾನಾರ್ಜನೆ ಗಟ್ಟಿಯಾಗಿರುತ್ತದೆ. ಆತ್ಮ ವಿಶ್ವಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಸರಳತೆ ಜೀವನದ ಆದರ್ಶವಾಗಬೇಕು. ಕನ್ನಡ ಭಾಷಾಭಿಮಾನವಿರಲಿ ಸುಸಂಸ್ಕೃತರಾಗಿರಿ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಆಲಸಿಗಳಿಗೆ ಸ್ಥಾನವಿಲ್ಲ. ನಮ್ಮ ಬದುಕನ್ನು ನಾವು ರೂಪಿಸಿಕೊಳ್ಳಬೇಕು. ಉನ್ನತಿಗಾಗಿ ನಿರಂತರ ದುಡಿಯಬೇಕು. ಸುಂದರ ಬದುಕು ಸರ್ವರಿಗೂ ಪ್ರಿಯವಾಗಿರುತ್ತದೆಯೆಂದು ಖ್ಯಾತ ಉದ್ಯಮಿ ಜಯಕೃಷ್ಣ ಇಂಡಸ್ಟ್ರೀಸ್‌ನ ಆಡಳಿತ ನಿರ್ದೇಶಕರಾದ ಶ್ರೀ ಜಯಕೃಷ್ಣ ಎ. ಶೆಟ್ಟಿ ಅವರು ಘೋಷಿಸಿದರು. ಜಯಕೃಷ್ಣ ಎ. ಶೆಟ್ಟಿಯವರು ಸೋಮೈಯ ಕಾಲೇಜಿನ ಕನ್ನಡ ಸಂಘದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತಾನಾಡುತ್ತಿದ್ದರು.

ಕನ್ನಡದ ಕಂಪನ್ನು ಎಲ್ಲೆಡೆ ಬೀರಬೇಕು. ಕನ್ನಡ ಶಾಲೆಗಳು ಬೆಳೆಯುವಂತೆ ಮಾಡಬೇಕು. ಪ್ರತಿಭಾ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ ವಾಗಿರುತ್ತದೆ. ಸಂಘವು ಕನ್ನಡ ಚಟುವಟಿಕೆಗಳಿಂದ ಕಾಲೇಜಿನಲ್ಲಿ ವಿಶೇಷ ಸ್ಥಾನ ಪಡೆದಿದೆಯೆಂದು ಅಧ್ಯಕ್ಷ ಸ್ಥಾನದಿಂದ ಉಪಪ್ರಾಂಶುಪಾಲ ಎಸ್. ಎನ್. ಅರಭಟ್ಟ ಅವರು ಸಾರಿದರು.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಕ್ರಿಯಾಶೀಲರಾಗುತ್ತಾರೆ. ಕನ್ನಡ ವಿದ್ಯಾರ್ಥಿಗಳಲ್ಲಿ ಪ್ರತಿಭಾ ವಿಕಸನಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ವಿದ್ಯಾರ್ಥಿಗಳಿಗೆ ಯೋಗ್ಯ ತರಬೇತಿಯನ್ನು ಶಿಕ್ಷಕರು ನೀಡಬೇಕೆಂದು ಸಮಾರೋಪ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಸಂಘದ ಕಾರ್ಯಾಧ್ಯಕ್ಷರಾದ ಡಾ. ಸಂಜೀವ ಶೆಟ್ಟಿ ಅವರು ಹೇಳಿದರು. ಆ ನಂತರ ಜರುಗಿದ ಅಂತರಶಾಲಾ ಸಮೂಹ ಗಾಯನ ಸ್ಪರ್ಧೆಗೆ ಗೋರೆಗಾಂವ್ ಕರ್ನಾಟಕ ಸಂಘದ ಗೌ. ಪ್ರ. ಕಾರ್ಯದರ್ಶಿ ಸುರೇಂದ್ರ ಮೆಂಡನ್, ವೀರಕೇಸರಿ ಕಲಾವೃಂದದ ಅಧ್ಯಕ್ಷ ಶಿವಕುಮಾರ ಶೆಟ್ಟಿ ಮತ್ತು ನಾಟಕ ಕಲಾವಿದೆ ಶ್ರೀಮತಿ ವಿಮಲಾ ಸೀತಾರಾಮ್ ಭಟ್ ಇವರುಗಳು ತೀರ್ಪುಗಾರರಾಗಿದ್ದು ಈ ಕೆಳಗಿನಶಾಲೆಗಳು ಬಹುಮಾನ ಗಳಿಸಿದವು.

ಪರೇಲವಾಡಿ ಮ.ನ.ಪಾ. ಕನ್ನಡ ಶಾಲೆ - ಪ್ರಥಮ, ವಿ.ಪಿ.ಎಮ್. ಕನ್ನಡ ಹೈಸ್ಕೂಲು - ದ್ವಿತೀಯ, ಶಾರದಾ ಕನ್ನಡ ಹೈಸ್ಕೂಲು - ತೃತೀಯ, ಪಾರ್ಕ್‌ಸೈಟ್ ಮ.ನ.ಪಾ. ಕನ್ನಡ ಶಾಲೆ - ಪ್ರೋತ್ಸಾಹಕ

**ದಿಲ್ಲಿಯಲ್ಲಿ ವಿಚಾರ ಸಂಕಿರಣ**

**ತಮಿಳು - ಕನ್ನಡ ಬಾಂಧವ್ಯ ಬೆಳೆಸಲು ಕರೆ**

ನವದೆಹಲಿ : ತಮಿಳು ಮತ್ತು ಕನ್ನಡ ಭಾಷಾ, ಸಾಹಿತ್ಯ ಮತ್ತು ಸಂಸ್ಕೃತಿ ಬಾಂಧವ್ಯ ಇತಿಹಾಸ ಕಾಲದಿಂದಲೂ ಬೆಳೆದು ಬಂದಿದ್ದು ಡಾ. ರಾಜಕುಮಾರ್ ಅಪಹರಣದ ಪ್ರಕರಣದಿಂದಾಗಿ ಈ ಬಾಂಧವ್ಯ ಕೆಡಿಸಿಕೊಳ್ಳದೆ ತಮಿಳು ಕನ್ನಡ ಬಾಂಧವ್ಯವನ್ನು ಇನ್ನಷ್ಟು ಸಮಧುರವಾಗಿ ಬೆಳೆಸಬೇಕೆಂದು 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು.

ದೆಹಲಿಯಲ್ಲಿ ಆಗಸ್ಟ್ 27 ರಂದು ಏರ್ಪಡಿಸಿದ್ದ 'ಕರ್ನಾಟಕ - ತಮಿಳುನಾಡು ಬಾಂಧವ್ಯದ ಭವಿಷ್ಯ' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಬಾ. ಸಾಮಗ ಅವರು ಮಾತನಾಡುತ್ತಿದ್ದರು.

ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಪರಸ್ಪರ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು

ಹೆಚ್ಚಿಸಬೇಕೆಂದು ಅವರು ಅಭಿಪ್ರಾಯ ಪಟ್ಟರು.

ಇದೇ ಸಂದರ್ಭದಲ್ಲಿ ಕನ್ನಡ - ತಮಿಳು ಪುಸ್ತಕ ಪ್ರದರ್ಶನ ಏರ್ಪಡಿಸಲಾಗಿತ್ತು.

**ಕರ್ನಾಟಕ ಮಲ್ಲ ಮಕ್ಕಳ ಫೋಟೋ ಸ್ಪರ್ಧೆ**

ಕರ್ನಾಟಕ ಮಲ್ಲ ಹತ್ತನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ಮಕ್ಕ ಫೋಟೋ ಸ್ಪರ್ಧೆಯನ್ನು ಏರ್ಪಡಿಸಿದೆ.

ನಿಯಮಗಳು

1) ಯಾವುದೇ ಪ್ರವೇಶ ಶುಲ್ಕವಿಲ್ಲ.
2) ಐದು ವರ್ಷದೊಳಗಿನ ಮಕ್ಕಳ ವಿವಿಧ ಭಂಗಿಯ ಬಣ್ಣದ ಪೋಸ್ಟ್ ಕಾರ್ಡ್ ಅಳತೆಯ ಫೋಟೋ ಮಾತ್ರ ಸ್ವೀಕರಿಸಲಾಗುವುದು.
3) ಮಗುವಿನ ಹೆಸರು, ಜನನ ದಿನಾಂಕ, ಸಂಪೂರ್ಣ ವಿಳಾಸವನ್ನು ಪ್ರತ್ಯೇಕ ಹಾಳೆಯಲ್ಲಿ ಬರೆಯಬೇಕು. ಫೋಟೋದ ಹಿಂದುಗಡೆ ಏನ ಬರೆಯಕೂಡದು.
4) ನಿರ್ಣಾಯಕ ತೀರ್ಮಾನವೇ ಅಂತಿಮ.
5) ಈ ಮೊದಲು ಕಳುಹಿಸಿರುವ ಫೋಟೋಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ. ಆದರೆ ಈ ಮೊದಲು ಫೋಟೋಗಳನ್ನು ಕಳುಹಿಸಿರುವರು. ಬೇರೆ ಫೋಟೋಗಳನ್ನು ಕಳುಹಿಸಬಹುದು.
6) ಒಂದು ಮಗುವಿನ ಒಂದೇ ಭಾವಚಿತ್ರ ಕಳುಹಿಸತಕ್ಕದ್ದು.
7) ವಿಳಾಸದಲ್ಲಿ 'ಫೋಟೋ ಸ್ಪರ್ಧೆ' ವಿಭಾಗ ಎಂಬುದಾಗಿ ಕಡ್ಡಾಯವಾಗಿ ಬರೆಯತಕ್ಕದ್ದು.
8) ಬಹುಮಾನ ವಿವರ :-
ಪ್ರಥಮ ರೂ. 1500/- ದ್ವಿತೀಯ ರೂ. 750/- ತೃತೀಯ ರೂ. 500/- 3 ಸಮಾಧಾನಕರ ತಲಾ ರೂ. 250/-
9) ಫೋಟೋ ಕಳುಹಿಸಲು ಕೊನೆಯ ದಿನಾಂಕ 31 10-2000

ವಿಳಾಸ : Editor
Karnataka Malla
(Kannada Daily)
ಮಕ್ಕಳ ಫೋಟೋ ಸ್ಪರ್ಧೆ
Gala No. 121, 1st Floor, Narayan Udyog Bhavan, Lalbaug Industrial Estate, Lalbaug, Mumbai-400 012.

**ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಸಂಭ್ರಮದ ಶ್ರೀ ಗಣೇಶೋತ್ಸವ**

ಮುಂಬಯಿ : ಮಾಟುಂಗದಲ್ಲಿರುವ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಶ್ರೀ ಗಣೇಶೋತ್ಸವವನ್ನು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಘದ ವಾಚನಾಲಯದಲ್ಲಿ ಆಚರಿಸಲಾಯಿತು. ಈ ವರ್ಷ ತಾ. 1-9-2000ದಿಂದ 3-09-2000ದ ವರೆಗೆ ಈ ಉತ್ಸವವನ್ನು ಆಚರಿಸಲಾಯಿತು. ವಿಗ್ರಹ ಪ್ರತಿಷ್ಠಾಪನೆಯ ದಿನವಾದ ತಾ. 1-9-2000ದಂದು ಬೆಳಿಗ್ಗೆ ಪೂಜೆ ಮಂಗಳಾರತಿ ಸಾಯಂಕಾಲ ಪಂಡಿತ ಶ್ರೀ ರಾಘವೇಂದ್ರ ಆಚಾರ್ಯ ಸಾಂಗ್ಲಿ ಅವರಿಂದ ಪ್ರವಚನ ಮಂಗಳಾರತಿ ನಡೆಯಿತು. ತಾ. 2-9-2000ದಂದು ಸಂಜೆ ಡೊಂಬಿವಲಿಯ ಅನುಜ ಮಹಿಳಾ ಸಂಘದ ಸದಸ್ಯೆಯರಿಂದ 'ಭಕ್ತಿ ಸಂಗೀತ' ಕಾರ್ಯಕ್ರಮ ನಡೆಯಿತು. ಬಳಿಕ ವೇದ ಮೂರ್ತಿ ಅಚ್ಚುತ ಭಟ್ ಪಂಡಿತ ಶ್ರೀ ರಾಘವೇಂದ್ರ ಆಚಾರ್ಯ ಸಾಂಗ್ಲಿ ಮತ್ತು ಸಂಗಡಿಗರಿಂದ ವೇದ ಘೋಷ ನಡೆಯಿತು. ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮೈಸೂರಿನ ಶ್ರೀ ಎಸ್. ಕೆ. ವೆಂಕಟಸ್ವಾಮಿಯವರು ಆಗಮಿಸಿದ್ದರು. ಅವರು 'ಭಕ್ತಿ ಸಂಗೀತ' ನೀಡಿದ ಅನುಜಾ ಮಹಿಳಾ ಸಂಘದ ಎಲ್ಲಾ ಸಂಗೀತ ಕಲಾವಿದರಿಗೆ ಪುಷ್ಪಗುಚ್ಛ ನೀಡಿ ಸತ್ಕರಿಸಿದರು. ಅಲ್ಲದೆ ಶ್ರೀ ಗಣೇಶೋತ್ಸವಕ್ಕೆ ಅತೀ ಹೆಚ್ಚಿ ಉದಾರ ಕಾಣಿಕೆ ಸಂಗ್ರಹಿಸಿದ ಶ್ರೀ ಪದ್ಮನಾಭ ಕೆ. ಶೆಟ್ಟಿ, ಶ್ರೀ ಗುರುರಾಜ್ ಎಸ್. ನಾಯಕ್, ಶ್ರೀ ವಾಸುದೇವ ಕಾಮತ್, ಶ್ರೀಮತಿ ಗಾಯತ್ರಿ ರಾಮು, ಶ್ರೀ ಬಾಬುರಾಯ ಪ್ರಭು ಮತ್ತು ರಂಗವಲ್ಲಿ ಸೇವೆ ಮಾಡಿದ ಶ್ರೀಮತಿ ಜಯಾ ಡಿ. ರೇವಣ್ಕರ್ ಇವರಿಗೂ ಸ್ಮರಣಿಕೆ ಕೊಟ್ಟು ಸತ್ಕರಿಸಿದರು.

ಶ್ರೀ ಗಣೇಶೋತ್ಸವದ ಆಚರಣಾ ಶಾಶ್ವತ ನಿಧಿಗೆ ಶ್ರೀ ಎಸ್. ವಿ. ಮೋಹನರು ಗಣಪತಿ ವಿಗ್ರಹದ ಸಲುವಾಗಿ ರೂ. 1000/- ಮತ್ತು ಶ್ರೀ ಎಸ್. ಕೆ. ವೆಂಕಟಸ್ವಾಮಿ ಮತ್ತು ಶ್ರೀಮತಿ ಸರೋಜಮ್ಮ ರೂ. 2000/- ನಿತ್ಯ ಸೇವೆಯ ಸಲುವಾಗಿ ಉದಾರ ಧನ ಸಹಾಯ ನೀಡುವೆನೆಂದು ತಿಳಿಸಿದರು. ಮಹಾಮಂಗಳಾರತಿ ಆದ ಬಳಿಕ ದಾದರ್ ಸಮುದ್ರ ತೀರದ ಶಿವಾಜಿ ಪಾರ್ಕಿನಲ್ಲಿ ವಿಗ್ರಹ ವಿಸರ್ಜನೆ ಆಯಿತು. ನಂತರ ಎಲ್ಲರಿಗೂ ಪ್ರಸಾದ ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

**ವರ್ಲಿ ಶಾಲೆಯಲ್ಲಿ ಭಜನೆ ಕಾರ್ಯಕ್ರಮ**

ಹಬ್ಬದೊಳೆಲ್ಲಾ ದಸರೆಯ ಹಬ್ಬ ಎನ್ನುತ್ತಾರೆ, ನಮ್ಮಲ್ಲಿ ಯುಗಾದಿಯಿಂದ ದೀಪಾವಳಿಯ ವರೆಗೂ ಅನೇಕ ಹಬ್ಬಗಳು ಬರುತ್ತವೆ, ಪ್ರತಿ ಹಬ್ಬಕ್ಕೂ ತನ್ನದೇ ಆದ ಆಚರಣಾ ಕ್ರಮವಿದೆ. ಆದರೆ ದಸರೆಯು ವಿಶೇಷವಾದ ಸ್ಥಾನವನ್ನು ಹೊಂದಿದೆ.

ಮೈಸೂರಿನ ದಸರಾ ಜಗತ್ಪ್ರಸಿದ್ಧವಾದದ್ದು, ಮಹಾರಾಜರ ಕಾಲದಲ್ಲಿ ಬಹಳ ವೈಭವವಾಗಿ ನಡೆಯುತ್ತಿತ್ತು. ಅರಮನೆಯಲ್ಲಿ ಬೊಂಬೆ ಇಡುವುದು, ಬೆಳಗಿನ ಹೊತ್ತು ಪೂಜೆ ಮಂಗಳಾರತಿ, ಮಾಡಿ ಸಂಜೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತಿದ್ದವು. ಇಂದಿಗೂ ಈ ಪದ್ಧತಿಯು ನಮ್ಮಲ್ಲಿ ಜಾರಿಯಲ್ಲಿದೆ. ಸಂಜೆಗೆ ಸಂಗೀತ ನೃತ್ಯ ಹೀಗೆ ಅನೇಕ ಹಿರಿಯ ಗಾಯಕ, ಗಾಯಕಿಯರ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಇದೇ ಕ್ರಮವನ್ನು ಅನೇಕ ಸಂಸ್ಥೆಗಳು ಇಂದಿಗೂ ಅನುಸರಿಸುತ್ತಿದೆ. ಹೀಗೆ ದಸರಾ ಉತ್ಸವದಲ್ಲಿ ವರ್ಲಿಯಲ್ಲಿರುವ 'ಆದರ್ಶ ನಗರದ ಕನ್ನಡ ಶಾಲೆ'ಯವರು ತಮ್ಮ ಉತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ನಮ್ಮ ಅಸೋಸಿಯೇಷನ್ನಿನ ಲಲಿತ ಕಲಾವಿಭಾಗದ ಸದಸ್ಯೆಯರಲ್ಲಿ ಅರಿಕೆ ಮಾಡಿಕೊಂಡಿದ್ದರು. ಸದಸ್ಯೆಯರು ಸುಮಾರು 45 ನಿಮಿಷಗಳ ಕಾಲದ ಒಂದು ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸತತವಾಗಿ ನಾಲ್ಕು ವರ್ಷಗಳಿಂದ ನಮ್ಮ ಸದಸ್ಯೆಯರು ಅಲ್ಲಿ ಕಾರ್ಯಕ್ರಮವನ್ನು ಕೊಡುತ್ತಿದ್ದಾರೆ. ಗಣಪತಿ ಸ್ತೋತ್ರದಿಂದ ಆರಂಭಿಸಿ, ರಾಮ, ಕೃಷ್ಣ, ದುರ್ಗೆ, ಸರಸ್ವತಿ ಹೀಗೆ ಹಲವು ಹಾಡುಗಳಿಂದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶಾಲೆಯ ಕಾರ್ಯದರ್ಶಿಗಳು ಎಲ್ಲರಿಗೂ ವಂದನೆಯನ್ನು ಸಲ್ಲಿಸಿದರು.

**ಒಂಬತ್ತನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನ-2000**

ಖ್ಯಾತ ಯಕ್ಷಗಾನ ಕಲಾವಿದ ಕುಂಬ್ಳೆ ಸುಂದರರಾಯರ ಅಧ್ಯಕ್ಷತೆಯಲ್ಲಿ ಡಾ. ವಿಶ್ವೇಶ್ವರಯ್ಯ ಸ್ಮಾರಕ ಮಂದಿರದಲ್ಲಿ ಅಕ್ಟೋಬರ್ 13ರಿಂದ 22ರ ವರೆಗೆ ನಡೆಯಲಿದೆ. ಪದವೀಧರ ಯಕ್ಷಗಾನ ಸಮಿತಿಯ ಆಶ್ರಯದಲ್ಲಿ ಜರಗಲಿರುವ ಈ ವೈಶಿಷ್ಟ್ಯಪೂರ್ಣ ಯಕ್ಷಗಾನ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡಿಗರು ಸಾಧ್ಯವಾದ ರೀತಿಯಲ್ಲಿ ನೆರವು ನೀಡಿ ಸಹಕರಿಸಬೇಕು ಎಂದು ಸಮಿತಿಯ ಅಧ್ಯಕ್ಷರಾದ ಶ್ರೀ ಎಚ್.ಬಿ.ಎಲ್. ರಾವ್ ಪ್ರಕಟಣೆಯೊಂದರಲ್ಲಿ ವಿನಂತಿಸಿ ಕೊಂಡಿದ್ದಾರೆ.

**ಡೊಂಬಿವಲಿ ಯಕ್ಷಗಾನ ಕಲಾ ಪ್ರೇಮಿಗಳ ಸಂಘ**

ಖ್ಯಾತ ಯಕ್ಷಗಾನ ಕಲಾವಿದ ಶ್ರೀ ರಾಮ ನಾಯಿರಿ

Regn. No. TECH/47-202/MBI-2000
Date of Posting : 10-10-2000

ಅವರನ್ನು ಡಾ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಡೊಂಬಿವಲಿ ಯಕ್ಷಗಾನ ಕಲಾ ಪ್ರೇಮಿಗಳ ಸಂಘದ ಅಧ್ಯಕ್ಷರಾದ ಶ್ರೀ ಬಿ. ಜಿ. ಪೈ ಅವರು ಸನ್ಮಾನಿಸಿ ರೂ. 5,001/- ಕ್ಷೇಮ ನಿಧಿಯನ್ನು ಇತ್ತೀಚೆಗೆ ಅರ್ಪಿಸಿದರು. ಸಂಘದ ಕಾರ್ಯದರ್ಶಿ ಪ್ರಾ। ವೆಂಕಟೇಶ್ ಪೈ ಸಂಘದ ಕುರಿತು, ಯಕ್ಷಗಾನ ಕಲಾವಿದರ ನಿಜ ಜೀವನದ ಸಂಕಷ್ಟಗಳ ಕುರಿತು ಮಾತನಾಡಿದರು.

**ಕನ್ನಡ ಸಂಘ, ಕೆ. ಜೆ. ಸೋಮಯ್ಯ ಕಾಲೇಜು**

ಸ್ಪರ್ಧಾತ್ಮಕ ಜಗತ್ತಿನಲ್ಲಿ ಆಲಸಿಗಳಿಗೆ ಸ್ಥಾನವಿಲ್ಲ. ನಮ್ಮ ಬದುಕನ್ನು ನಾವು ರೂಪಿಸಿಕೊಳ್ಳಬೇಕು. ಉನ್ನತಿಗಾಗಿ ನಿರಂತರ ದುಡಿಯಬೇಕು, ಸುಂದರ ಬದುಕು ಸರ್ವರಿಗೂ ಪ್ರಿಯವಾಗಿರುತ್ತದೆಯೆಂದು ಜಯಕೃಷ್ಣ ಎ. ಶೆಟ್ಟಿಯವರು ಹೇಳಿದರು. ಅವರು ಸೋಮೈಯ ಕಾಲೇಜಿನ ಕನ್ನಡ ಸಂಘದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಹೇಳಿದರು.

ಸಂಘವು ಕನ್ನಡ ಚಟುವಟಿಕೆಗಳಿಂದ ಕಾಲೇಜಿನಲ್ಲಿ ವಿಶೇಷ ಸ್ಥಾನ ಪಡೆದಿದೆಯೆಂದು ಅಧ್ಯಕ್ಷ ಸ್ಥಾನದಿಂದ ಉಪಪ್ರಾಂಶುಪಾಲ ಎಸ್.ಎನ್. ಅರಬಟ್ಟಿ ಅವರು ಸಾರಿದರು.

ಕನ್ನಡ ವಿದ್ಯಾರ್ಥಿಗಳಲ್ಲಿ ಪ್ರತಿಭಾ ವಿಕಸನಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ವಿದ್ಯಾರ್ಥಿಗಳಿಗೆ ಯೋಗ್ಯ ತರಬೇತಿಯನ್ನು ಶಿಕ್ಷಕರು ನೀಡಬೇಕೆಂದು ಸಮಾರೋಪ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಸಂಘದ ಕಾರ್ಯಾಧ್ಯಕ್ಷರಾದ ಡಾ. ಸಂಜೀವ ಶೆಟ್ಟಿ ಅವರು ಹೇಳಿದರು. ಆನಂತರ ಅಂತರಶಾಲಾ ಸಮೂಹ ಗಾಯನ ಸ್ಪರ್ಧೆ ಜರಗಿತು.

ಸಮೂಹಗಾಯನ ಸ್ಪರ್ಧೆಯಲ್ಲಿ ಈ ಕೆಳಗಿನ ಶಾಲೆಗಳು ಬಹುಮಾನ ಗಳಿಸಿದವು.

ಪರೇರವಾಡಿ ಮ.ನ.ಪಾ. ಕನ್ನಡ ಶಾಲೆ - ಪ್ರಥಮ, ವಿ.ಪಿ.ಎಮ್. ಕನ್ನಡ ಹೈಸ್ಕೂಲು - ದ್ವಿತೀಯ, ಶಾರದಾ ಕನ್ನಡ ಹೈಸ್ಕೂಲು - ತೃತೀಯ, ಪಾರ್ಕ್‌ಸೈಟ್ ಮ.ನ.ಪಾ. ಕನ್ನಡ ಶಾಲೆ - ಪ್ರೋತ್ಸಾಹಕ

**TRIMURTI**
**JEWELLERS**
**GOLD AND DIAMOND ORNAMENTS**
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.
Phone : **402 34 85**

Dear Sir/Madam

I introduce myself, Shri Suresh Shastry, as a Purohit migrated from Bangalore to Mumbai and am at present residing at Dombivli.

I am a Kannada Brahmin from Bangalore (Karnataka) and have studied Vedas fully. I am able to perform all our normal and regular poojas, homams, as well as marriages Upanayam, Ceremonies and other anniversaries, I can also write horoscopes and match them and having knowledge of astrology. I am also available for performing "APARAKRIYA" where people are very rarely available in Mumbai. I have furnished my mobile phone number as indicated above. As such I can be easily contacted whenever and wherever the need arises.

I am certain that one will be much satisfied to my chanting of mantras and performing the ceremonies according to one's family customs.

I will be happy if I am ever invited for any functions/ceremonies

With regards

Yours sincerely
**Suresh Shastry.**

**Please Contact me at:**

No.101-A Vishweshwara
Mahal,C.H.S. Behind
Dr. Wamede Clinic,
Old Dombivli, Dombivli (W),
Thane-421 202.
Mobile No. 982 0317949

## ಅಗಲಿಕೆ



ಶ್ರೀ ರಾಮದಾಸ್ ಕಾಮತ್

ರಾಮದಾಸ್ ಕಾಮತ್ ಅಸೋಸಿಯೇಶನ್ನಿನ ಆಜೀವ ಸದಸ್ಯರಾದದ್ದು ಕೆಲವು ತಿಂಗಳ ಹಿಂದೆ. ಆದರೆ, ಅವರ ಪರಿಚಯ ಅಸೋಸಿಯೇಶನ್ನಿಗೆ ಬಹಳ ದಿನಗಳಿಂದ. ಕಾರಣ ಅವರು ನಮ್ಮ ಹಿರಿಯ ಆಜೀವ ಸದಸ್ಯರಾದ ಶ್ರೀ ಕೆ.ಎಂ. ಕಾಮತ್‌ರವರ ಮಗ ಮತ್ತು ವಿಜಯ ಕೇಟರರ್ಸ್‌ನಲ್ಲಿ ಸಕ್ರೀಯವಾಗಿ ಇದ್ದವರು. ಹೀಗಾಗಿ ಅಸೋಸಿಯೇಷನ್ನಿನ ಪ್ರತಿಯೊಂದು Function ನಲ್ಲೂ ಅವರ active involvement ಇರುತ್ತಾ ಇತ್ತು. ರಾಮದಾಸ್ ವೃತ್ತಿಯಿಂದ Chartered Accountant ಆಗಿದ್ದರು. ಆದರೆ ಅವರು ತಮ್ಮ Family bussiness ಆದ ಕ್ಯಾಟರಿಂಗ್‌ನಲ್ಲೇ ಪೂರ್ತಿಯಾಗಿ involve ಆಗಿದ್ದರು ಮತ್ತು ಎಲ್ಲವನ್ನೂ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. 34 ವರ್ಷದ ರಾಮದಾಸ್ ಅವರು 3-4 ವಾರಗಳ ಅಸ್ವಸ್ಥದ ನಂತರ ಈ ರೀತಿ ಹಠಾತ್ತಾಗಿ ನಿಧನ ಹೊಂದಿದ್ದು, ಅವರ ಸಂಪರ್ಕವಿದ್ದ ಎಲ್ಲರಿಗೂ, ತಡೆಯಲಾರದ ಆಘಾತ ವಾಗಿದೆ. ಈ ಅಪಾರ ದುಃಖವನ್ನು ಸೈರಿಸುವ ಶಕ್ತಿ ಅವರ ಮನೆಯವರಿಗೆ ದೊರಕಲಿ ಎಂದು ನೇಸರು ಪ್ರಾರ್ಥಿಸುತ್ತದೆ.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38